ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ–5)

(ಆ) ಪರ್ಯಾಲೋಚನಾ ಪ್ರಸ್ತಾವ ಮತ್ತು ಅಂಗೀಕಾರ

(i) ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕ,2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ವೆಂಕಟರಮಣಪ್ಪ : ಮಾನ್ಯ ಅಧ್ಯಕ್ಷರೆ, ಕಳೆದ 50 ವರ್ಷಗಳಿಂದ ಖಾದಿ ಗ್ರಾಮೋದ್ಯೋಗಿಗಳಿಗೆ ಸುಮಾರು 220 ಕೋಟಿ ರೂಪಾಯಿ ಹಣವನ್ನು ಬೇರೆ ಬೇರೆ ಯೋಜನೆಯಡಿಯಲ್ಲಿ ಸಾಲ ನೀಡಲಾಗಿದೆ. ಬಡಗಿತನ ಮತ್ತು ಕಂಬಾರ, ಬೈವರಿ, ಹಣ್ಣು ಪರಿಷ್ಕರಣ ಸುಣ್ಣ ಉದ್ದಿಮೆ ಮತ್ತು ಅಲ್ಯುಮಿನಿಯಂ ಇಂತಹ 29 ಘಟಕಗಳಿಗೆ ಧನಸಹಾಯವನ್ನು ನೀಡಿದೆ. ಅದರಲ್ಲಿ 25,000 ಘಟಕಗಳಿಗೆ 220 ಕೋಟಿ ರೂಪಾಯಿಗಳನ್ನು ಫಲಾನುಭವಿಗಳಿಗೆ ಸಾಲ ಮಂಜೂರು ಮಾಡಿದೆ. ಅದರಲ್ಲಿ ಸುಮಾರು 105 ಕೋಟಿ ರೂಪಾಯಿ ಸಾಲ ಬರಬೇಕಾಗಿದೆ. ಅವರು ಸಾಲ ತೆಗೆದುಕೊಳ್ಳ ಬೇಕಾದರೆ ಜಮೀನು, ಪ್ರಾಪರ್ಟಿಯನ್ನು ಆಧಾರ ಮಾಡಿದ್ದಾರೆ.

ಅದರಲ್ಲಿ ಸಾಲ ವಸೂಲಿ ಆಗದಿರುವುದಕ್ಕೆ revenue recovery ಮೂಲಕ ವಸೂಲಿ ಮಾಡುವುದಕ್ಕೆ ಮಂಡಳಿಯಲ್ಲಿ ಅಧಿಕಾರ ಇದೆ. ಕಂದಾಯ ವಸೂಲಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ

ಕಳುಹಿಸಿರುತ್ತದೆ. ತಹಶೀಲ್ದಾರ್ ಸಾಲವನ್ನು ವಸೂಲಿ ಮಾಡುತ್ತಾರೆ. ಮಂಡಳಿ ಅಧ್ಯಕ್ಷರಿಗೆ ವಸೂಲಿ ಪ್ರಮಾಣ ಪತ್ರಕ್ಕೆ ಸಹಿ ಮಾಡುವ ಅಧಿಕಾರವಿರುತ್ತದೆ. ಮಂಡಳಿಯಲ್ಲಿ ಆಡಳಿತಾತ್ಮಕ ಕಾರ್ಯದ ಅಂಗೀಕಾರವಾಗಿರುವುದರಿಂದ ಮಂಡಳಿಯ ಕಾರ್ಯನಿರ್ವಹಣಾಧಿಕಾರಿಯವರು ಆಡಳಿತ ಮುಖ್ಯಸ್ಥರಾಗಿರುತ್ತಾರೆ. ಕಂದಾಯ ವಸೂಲಿ ಪ್ರಮಾಣ ಪತ್ರಕ್ಕೆ ಸಹಿ ಮಾಡುವುದಕ್ಕೆ ಮಂಡಳಿಯ ಅಧ್ಯಕ್ಷರ ಬದಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಅಧಿಕಾರ ನೀಡಬಹುದಾಗಿದೆ ಎಂದು ಕೋರಿದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಹೇಳಿಕೆ ನೋಡಿದರೆ ಕಳೆದ 50 ವರ್ಷಗಳಿಂದ ಸುಮಾರು 220 ಕೋಟಿ ರೂಪಾಯಿಯನ್ನು ಖಾದಿ ಬೋರ್ಡ್ ಮುಖೇನ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. 50 ವರ್ಷವಾದ ಮೇಲೆ ಈಗ ರಿಕವರಿ ಪ್ರೋಸಿಡಿಂಗ್‌ಗೋಸ್ಕರ arrears of land revenue ಎಂದು ಮಾಡುವುದಕ್ಕೆ ಬಿಲ್ ತಂದಿದ್ದೀರಲ್ಲ, ಈ ರೀತಿ ಮಾಡುವುದರಿಂದ ನಿಜವಾಗಿಯೂ ಅದನ್ನು ವಸೂಲಿ ಮಾಡುವುದಕ್ಕಾಗುತ್ತದೆಯೇ? ನೀವು ಸಾಲ ಯಾರಿಗೆ ಕೊಟ್ಟಿದ್ದೀರಿ? ಖಾದಿ ಬೋರ್ಡ್‌ನಲ್ಲಿ ಅಸೋಸಿಯೇಷನ್ ಇರುತ್ತದೆ, family association ಇನ್ನು ಬೇರೆ ಬೇರೆ ಅಸೋಸಿಯೇಷನ್ ಇರುತ್ತದೆ. ಇಂತಹ ಅಸೋಸಿಯೇಷನ್‌ಗಳಿಗೆ ನೀವು ಸಾಲ ಕೊಟ್ಟಾಗ ಯಾವ ದಾಖಲಾತಿಗಳು ಇರುವುದಿಲ್ಲ, ಏನೂ ಇರುವುದಿಲ್ಲ. ಆದರೆ ಈಗ ಆ ಸಾಲವನ್ನು ವಾಪಸ್ಸು ಪಡೆಯುವುದಕ್ಕೋಸ್ಕರ ನಮಗೆ ಅಧಿಕಾರ ಕೇಳುತ್ತಿದ್ದೀರಲ್ಲ, ಅದು ಸಾಧ್ಯವೇ? ಒಂದು ಸಾರಿ ಅದಕ್ಕೆ ದುಡ್ಡು ಕೊಟ್ಟರೆ limitations ಇಲ್ಲವೆ? ಏನು process ಆಗಿದೆ? ಏನು ಕತೆ? ನೀವು ಇದಕ್ಕೆ blank ಆಗಿ order ತೆಗೆದುಕೊಳ್ಳುವುದರಿಂದ, ನನಗೆ ಅನಿಸಿದ ಪ್ರಕಾರ ಇದರಲ್ಲಿ ಖಾದಿ ಬೋರ್ಡ್ ಅಸೋಸಿಯೇಷನ್‌ನವರು ಸಾಲ ಜಾಸ್ತಿ ತೆಗೆದು ಕೊಂಡಿರುವವರಿದ್ದಾರೆ. ಆದರೆ ಅವರಿಗೆ ಎಲ್ಲೋ ಒಂದು ರೀತಿಯಲ್ಲಿ ಕಿರುಕುಳ ಕೊಡುವುದಕ್ಕೆ ಒಂದು ಕಾರಣವಾಗುತ್ತದೆ ಎನ್ನುವುದನ್ನು ಬಿಟ್ಟರೆ ನಿಮಗೆ ದುಡ್ಡು ವಸೂಲಾಗುವುದಕ್ಕಾಗುವುದಿಲ್ಲ. ನೀವು ಈಗ ತಂದಿರುವು ದರಲ್ಲಿ ಏನಾದರೂ ಅರ್ಥವಿದೆಯೇ?

ಶ್ರೀ ವೆಂಕಟರಮಣಪ್ಪ : ಗ್ರಾಮೋದ್ಯೋಗಿಗಳು ಈ ಮಂಡಳಿಗೆ ನಿಮ್ಮ ಸಾಲವನ್ನು ವಾಪಸ್ಸು ಕೊಡುತ್ತೇವೆಂದು ತಮ್ಮ property ಆಧಾರ ಮಾಡಿಕೊಟ್ಟು ಸಾಲವನ್ನು ತೆಗೆದುಕೊಂಡಿದ್ದಾರೆ.

(7-00 PM)

ಶ್ರೀ ಸಿದ್ದರಾಮಯ್ಯ : ನೀವು ಇಲ್ಲಿಯವರೆಗೆ various scheme ಗೆ ಸಾಲ ಕೊಟ್ಟಿದ್ದೀರಲ್ಲ, ಆ arrears ಅನ್ನು ಭೂ ಕಂದಾಯ ರೀತಿಯಲ್ಲಿ ವಸೂಲು ಮಾಡುವುದಕ್ಕೆ ಹೊರಟಿದ್ದೀರಿ. ಪಾಪ ಸಾಲ ತೆಗೆದುಕೊಂಡಿದ್ದಾರಲ್ಲ, ಅವರು ತಮ್ಮ ಗ್ರಾಮೋದ್ಯೋಗ ಕೆಲಸಗಳನ್ನು ಮಾಡಿಕೊಂಡಿದ್ದಾರಾ? ಅದಕ್ಕೆ ಏನಾದರೂ ಮಾಹಿತಿ ಇದೆಯೇ? ಅವರು ಯಾವುದ ಕ್ಕೋಸ್ಕರ ಸಾಲ ತೆಗೆದುಕೊಂಡಿದ್ದರು? ಅವರು ಸಾಲ ತೆಗೆದುಕೊಂಡಿದ್ದರಲ್ಲ ಅದಕ್ಕೆ ಸಂಬಂಧಪಟ್ಟಂತೆ ಅಸೆಟ್ಸ್ ಇವೆಯೇ? ಅವರು ಸಾಲ ತೆಗೆದುಕೊಂಡ ಮೇಲೆ ಅಸೆಟ್ಸ್ ಏನಾದರೂ ಕ್ರಿಯೇಟ್ ಆಗಿದೆಯಾ? ಅದರಿಂದ ಏನಾದರೂ ಅವರಿಗೆ ಅನುಕೂಲಗಳಾಗಿವೆಯೇ? Employment generation ಏನಾದರೂ ಆಗಿದೆಯಾ? ಇಷ್ಟು ವರ್ಷ ಯಾವ ಕಾರಣಕ್ಕೋಸ್ಕರ ಅವರು ಬಾಕಿದಾರರಾದರು? ಅವರು ತಯಾರು ಮಾಡುವಂತಹ ಪದಾರ್ಥಗಳಿಗೆ ಏನಾದರೂ ಮಾರುಕಟ್ಟೆ ಇದೆಯೇ? ನೀವು ಅಂಥಾದ್ದಕ್ಕೆ ಏನಾದರೂ ಕೊಟ್ಟಿದ್ದೀರಾ? ಅಥವಾ assets ಇಲ್ಲದೇ ಅವರು ಈ ಖಾದಿ industry ಗಳನ್ನು ಮಾಡದೇ ಹಾಗೆ ಸಾಲವನ್ನು ತೆಗೆದುಕೊಂಡು ಬಿಟ್ಟಿದ್ದರೇ? ಆ ರೀತಿ ಏನಾದರೂ ಇದ್ದರೆ ಹೇಳಿ.

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) : ಈ ಸಾಲ 25 ವರ್ಷಗಳಿಂದ ಈ ಕಡೆಯಿಂದ ಇರುವಂಥ ಸಾಲವನ್ನು ವಸೂಲಿ ಮಾಡುವಂಥಾದ್ದು.

ಶ್ರೀ ಟಿ.ಬಿ.ಜಯಚಂದ್ರ : ನೀವು ಸಾಲ ಕೊಟ್ಟಿರುವಂಥಾದ್ದು category 28ರಲ್ಲಿ ಹೇಳಿದ್ದೀರಲ್ಲಾ, ಅದು ಸೋಪ್ ಮಾಡುವುದು, ನೇಗಿಲು ಮಾಡುವಂಥದ್ದು, ಈ ರೀತಿಯಾಗಿ ಕುಶಲ ಕೈಗಾರಿಕೆಯನ್ನು encourage ಮಾಡುವುದಕ್ಕೋಸ್ಕರ ಖಾದಿ ಬೋರ್ಡ್ ಮಹಾತ್ಮ ಗಾಂಧೀಜಿಯವರ ಚಿಂತನೆಯಲ್ಲಿ ಮೂಡಿ ಬಂದಿರುವಂಥದ್ದು. ಈಗ ನೀವು ಇತ್ತೀಚಿನ ದಿವಸಗಳಲ್ಲಿ ಏನು ಮಾಡಿದ್ದೀರಿ? ನೀವು ಸಾಲ ಕೊಡುವಂಥ ಸಂದರ್ಭ ಬಂದಾಗ ಕೆಲವು ಕಡೆಗಳಲ್ಲಿ ಬ್ಯಾಂಕ್‌ನಿಂದಲೂ ಸಾಲವನ್ನು ತೆಗೆದುಕೊಂಡು ಕೊಟ್ಟಿದ್ದೀರಿ. ನೀವು ಸಬ್ಸಿಡಿಯ ಜೊತೆಗೆ ಬ್ಯಾಂಕ್‌ನಿಂದಲೂ ಸಹ ಸಾಲವನ್ನು ಕೊಟ್ಟಿದ್ದೀರಿ. ನಾವು ನಿಜವಾಗಿಯೂ ಹೇಳಬೇಕೆಂದರೆ ನಿಮ್ಮಲ್ಲಿ ಎಲ್ಲೂ ಕೂಡ ಈ asset ಗಳು ಇರುವುದಕ್ಕೆ ಸಾಧ್ಯವಿಲ್ಲ. ನನ್ನ ಒಂದು ಸಲಹೆ ಏನೆಂದರೆ,

ಇಲ್ಲಿ ಜೇನು ಸಾಕಾಣಿಕೆ ಮಾಡುವಂಥದ್ದು. ಸೋಪು ಮಾಡುವಂಥದ್ದು. ಈ ರೀತಿಯಾಗಿ ಇರುವಂಥ ಚಟುವಟಿಕೆಗಳಿಗೆ ಕೊಟ್ಟಿರುವಂಥದ್ದು. ಇದರಲ್ಲಿ ಸಾಲವನ್ನು 25 ಸಾವಿರ, 50 ಸಾವಿರ, ಒಂದು ಲಕ್ಷ. ರೂಪಾಯಿಗಳನ್ನು ಕೊಟ್ಟಿದ್ದರೆ ಅದು ಪೆಚ್ಚಿರುತ್ತದೆ. ಇದಕ್ಕಿಂತ ಹೆಚ್ಚಿಗೆ ಕೊಟ್ಟಿರುವುದಕ್ಕೆ ಸಾಧ್ಯವಿಲ್ಲ. ನೀವು ವಸೂಲಿ ಹೆಸರಿನಲ್ಲಿ ವಸೂಲಿಯನ್ನು ಮಾಡುವುದಕ್ಕೆ ಶುರು ಮಾಡಿ ಬಿಟ್ಟರೆ, ನಿಮಗೆ ಏನು ಸಿಗುತ್ತದೆ? ದಯಮಾಡಿ ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಅವನು ಈ ಸಾಲದಿಂದ ತೆಗೆದುಕೊಂಡಿರುವ ದುಡ್ಡಿನಿಂದ ನಿಜವಾಗಿಯೂ ದುಡಿದುಕೊಂಡಿದ್ದರೆ, ಅದು ಸಹಾಯವಾಗಿದ್ದರೆ ನೀವು ವಾಪಸ್ಸು ಕೇಳುವುದರಲ್ಲಿ ಏನು ಅರ್ಥವಿಲ್ಲ. ಈ ಹಣ ಯಾವುದೂ ವಾಪಸ್ಸು ಬರುವಂಥದ್ದಲ್ಲ. ದಯಮಾಡಿ ಅದನ್ನು ತಾವು ಯೋಚನೆ ಮಾಡಿ. ನೀವು ಈ ಬಿಲ್ ಅನ್ನು ತಂದು ಉದ್ದೇಶಪೂರ್ವಕವಾಗಿ ಕಿರುಕುಳ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ವಿನಃ ದುಡ್ಡು ವಸೂಲಿಯಾಗುವುದಿಲ್ಲ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈಗ ಬಿಲ್‌ಗೆ ತಿದ್ದುಪಡಿ ತರುವ ಉದ್ದೇಶ ಏನಿದೆ, ಇದು ಮೂಲತಃ ಮಹಾತ್ಮ ಗಾಂಧೀಜಿಯವರ Economic philosophyಗೆ ವಿರುದ್ಧವಾದದ್ದು. ಇದು ಗಾಂಧೀಜಿಯವರ ಆರ್ಥಿಕ ನೀತಿಗೆ ವಿರುದ್ಧವಾಗಿರುವಂಥ ಒಂದು ಕಾಯಿದೆ ಆಗಿದೆ. ಇಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಕ್ಷೇತ್ರಕ್ಕೆ ಏಕೆ ಮಹತ್ವ ಬಂತು. ಸ್ವಾತಂತ್ರ್ಯದ ಉದ್ದೇಶಗಳಲ್ಲಿ ಪ್ರಮುಖವಾಗಿರುವಂಥ ಉದ್ದೇಶ ಗುಡಿ ಕೈಗಾರಿಕೆ ಮತ್ತು ದೇಶೀಯ ಪದ್ಧತಿಯ ಆಡಳಿತದ ಮುಖಾಂತರ ಗ್ರಾಮೀಣ ಬದುಕು ಸ್ವಾವಲಂಬನೆಯಿಂದ ಕೂಡಿರಬೇಕೆನ್ನುವಂಥದ್ದು. ತಾವು ಮೊನ್ನೆ The Week ಪತ್ರಿಕೆಯಲ್ಲಿ ಒಂದು article ಬಂದಿರುವಂಥದ್ದನ್ನು ನೋಡಿರಬಹುದು. ಶ್ರೀ ಅಮರ್ತ್ಯಸೇನ್‌ರವರು ಬರೆದಿರುವಂಥ ಪುಸ್ತಕಕ್ಕೆ noble prize ಬಂದಿದೆ. ಯಾವ ಆಧಾರದ ಮೇಲೆ ಬಂತು? Poverty and Famine ಎರಡನ್ನೂ combined ಮಾಡಿ, Gandhi & Economy Philosophy ಮೇಲೆ ಅವರು ಬರೆದಿರುವಂಥ ಪ್ರಸ್ತಕಕ್ಕೆ noble prize ಬಂತು. ಅವರು ಅದನ್ನು ಉಲ್ಲೇಖಿಸಿ ಮಾತನಾಡುತ್ತಾ, ಮೊನ್ನೆ 27 ನೇ ತಾರೀಖಿನ The Week ಪತ್ರಿಕೆಯಲ್ಲಿ "Ambedkar is the father of Economics" ಎಂದು ಅಮರ್ತ್ಯಸೇನ್‌ರವರು ಹೇಳಿದ್ದಾರೆ. ಯಾವ ಜನರು ಹಳ್ಳಿಗಳಲ್ಲಿ ಬದುಕೇ ಇಲ್ಲದೇ, ಅವರು ತಮ್ಮ ಸ್ವಂತ ಕಾಲಿನ ಮೇಲೆ

ನಿಲ್ಲುವುದಕ್ಕೆ ಆಗದೇ ಕಷ್ಟ ಪಡುತ್ತಿದ್ದಾರೆ, ಬವಣೆ ಪಡುತ್ತಿದ್ದಾರೆ, ಅವರನ್ನು ಆರ್ಥಿಕವಾಗಿ ಮೇಲೆ ಎತ್ತಬೇಕು. ಆ ಕಾರಣಕ್ಕೆ ಈ ಗುಡಿ ಕೈಗಾರಿಕೆಗಳ ಮುಖಾಂತರ ಅವರು ಸ್ವಾವಲಂಬಿಗಳಾಗಿ ಬದುಕಲಿ ಎಂದು ಈ ಒಂದು ಯೋಜನೆಗಳನ್ನು ತಂದಿದ್ದಾರೆ. ತಾವು ಯಾರಿಗೆ ಸಾಲವನ್ನು ಕೊಡುತ್ತೀರಿ, ಅವರಿಂದ ಕಂದಾಯ ಇಲಾಖೆಯವರು ಕಂದಾಯವನ್ನು ವಸೂಲು ಮಾಡುವ ರೀತಿಯಲ್ಲಿ ತಾವು ವಸೂಲು ಮಾಡುತ್ತೇವೆಂದು, ಖಾದಿ ಉದ್ಯೋಗಕ್ಕೂ ಕಂದಾಯ ವಸೂಲಿಗೂ ಯಾವ ರೀತಿಯ ಸಂಬಂಧ ವಾಗುತ್ತದೆ? ಆದುದರಿಂದ ತಾವು ಈ ಕೆಲಸಕ್ಕೆ ಕೈ ಹಾಕಬೇಡಿ. ಅವರು ಹೆಚ್ಚು ಸ್ವಾವಲಂಬನೆಯ ಬದುಕನ್ನು ಬದುಕುವುದಕ್ಕೆ ಪೂರಕವಾದ ಯೋಜನೆ ಯನ್ನು ತಾವು ಜಾರಿಗೆ ತೆಗೆದುಕೊಂಡು ಬರಬೇಕು. ಅವರಿಗೆ ಸಹಾಯವನ್ನು ಮಾಡಿ, ಗ್ರಾಮೀಣ ಪರಿಸರದಲ್ಲಿ ಸಿಗುವಂಥ ಸಂಪನ್ಮೂಲಗಳನ್ನು ಬಳಸಿಕೊಂಡು ಅಲ್ಲಿ ಜನರು ತಮಗೆ ಬೇಕಾದಂಥ ವಸ್ತುಗಳನ್ನು ಉತ್ಪಾದನೆ ಮಾಡಿ, ಅದನ್ನು ನಗರದ ಮಾರುಕಟ್ಟೆಗಳಲ್ಲಿ ಮಾರಿ ಹಣವನ್ನು ಪಡೆದು, ಅವರು ಬದುಕುವಂಥ ವಾತಾವರಣವನ್ನು ನೀವು ನಿರ್ಮಾಣ ಮಾಡಬೇಕು. ನೀವು ಈಗ ತಂದಿರುವಂಥ ತಿದ್ದುಪಡಿ ಏನು ಇದೆ. ಅದು ಅವರಲ್ಲಿ ಯಾರ್ಯಾರು ಕೊಟ್ಟಿಲ್ಲವೆಂದು ಅವರಿಂದ ವಸೂಲಿ ಮಾಡುವಂಥ ಪ್ರಯತ್ನವೇನು ಇದೆ, ಅದು ಸರಿಯಿಲ್ಲವೆಂದು ಹೇಳುತ್ತೇನೆ. ದಯವಿಟ್ಟು ಸರ್ಕಾರ ಇದನ್ನು ಪುನರ್ ಪರಿಶೀಲನೆ ಮಾಡಿ, ಅವರಿಗೆ ತೊಂದರೆ ಯಾಗದಂತೆ ಅನಾನುಕೂಲವಾಗದ ರೀತಿಯಲ್ಲಿ ನೆರವನ್ನು ನೀಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಪ್ರಯೋಜನವನ್ನು ಹೆಚ್ಚಿಗೆ ಗ್ರಾಮೀಣ ಪ್ರದೇಶದ ಜನರು ಉಪಯೋಗಿಸಿಕೊಳ್ಳುವವರು. ನಾವು ರಾಮಸ್ವಾಮಿಯವರ ವರದಿಯಲ್ಲಿ ಭೂ ಒತ್ತುವರಿ ಮಾಡಿಕೊಂಡಿರುವ ವಿಚಾರವಾಗಿ ತಿದ್ದುಪಡಿ ಯನ್ನು ತಂದು ಅದೆಲ್ಲವನ್ನು ವಶಪಡಿಸಿಕೊಳ್ಳುತ್ತಾರೆಂದು ಅಂದು ಕೊಂಡಿದ್ದೆವು. ಆದರೆ ಇದು ಬಡವರ ಮೇಲೆ ಬ್ರಹ್ಮಾಸ್ತ್ರವನ್ನು ಬಿಟ್ಟ ಹಾಗೆ ಆಗುತ್ತದೆ. ಇದರಲ್ಲಿ cheat ಮಾಡಿದ್ದರೆ, ಇದರ ಹೆಸರಿನಲ್ಲಿ ಹಣ ದುರುಪ ಯೋಗವಾಗಿದ್ದರೆ, ನೀವು ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಅದರ ಬಗ್ಗೆ ನಮ್ಮದೇನು ತಕರಾರು ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಇದರಲ್ಲಿ ಇತಿಮಿತಿಯನ್ನು ನೀವು ಗುರುತು ಮಾಡಬೇಕು. ಯಾರ್ಯಾರು

ಎಷ್ಟು ಹಣವನ್ನು ಅದು 25,000, 50,000, 1,00,000 ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ, ಇದಕ್ಕಿಂತ ಹೆಚ್ಚಿಗೆ ಕೊಟ್ಟಿರುವುದಿಲ್ಲ. ಒಂದು ಲಕ್ಷ, ಹತ್ತು ಲಕ್ಷ, ಹದಿನೈದು ಲಕ್ಷ ತೆಗೆದುಕೊಂಡಿ ರುವವರೆಲ್ಲಾ ತಿಮಿಂಗಲಗಳಾಗಿರುತ್ತಾರೆ. ನೀವು ಅಂಥವರ ಹತ್ತಿರ ವಸೂಲಿ ಮಾಡಿ. ಇದರಡಿಯಲ್ಲಿ ತಪ್ಪು ಮಾಹಿತಿ ಯನ್ನು ಕೊಟ್ಟು shelter ತೆಗೆದುಕೊಂಡಿರುವವರ ಮೇಲೂ ನೀವು ಕ್ರಮ ತೆಗೆದುಕೊಳ್ಳಿ. ಆದರೆ ನೀವು ಇದನ್ನು ಮುಂದಿಟ್ಟುಕೊಂಡು ಬಡವರ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗ ಮಾಡುವಂಥ ದ್ದನ್ನು ಬಿಡಬೇಕಾಗುತ್ತದೆ. ದಯಮಾಡಿ ತಾವು ಇನ್ನೊಮ್ಮೆ ಯೋಚನೆ ಮಾಡಿ, ಇದರ ಬಗ್ಗೆ ಸರ್ಕಾರ ತೀರ್ಮಾನವನ್ನು ತೆಗೆದುಕೊಳ್ಳ ಬೇಕೆಂದು ತಮ್ಮ ಮುಖಾಂತರ ಹೇಳಲಿಚ್ಛಿಸುತ್ತೇನೆ.

ಶ್ರೀ ಶ್ರೀಶೈಲಪ್ಪ ಬಿದರೂರು : ಮಾನ್ಯ ಅಧ್ಯಕ್ಷರೆ, ಖಾದಿ ಮತ್ತು ಗ್ರಾಮೋದ್ಯೋಗದಲ್ಲಿ ಒಂದು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದಿದ್ದರು. ಅದು ಮೂರ್ನಾಲ್ಕು ವರ್ಷಗಳು ಮಾತ್ರ ಈ ಯೋಜನೆ ಇತ್ತು. ಬಹಳಷ್ಟು ಖಾದಿ ಸೆಕ್ಟಾರ್‌ಗೆ ಹಣಕಾಸಿನ ನೆರವನ್ನು ಕೊಟ್ಟಿಲ್ಲ. ಸಣ್ಣ ಉದ್ದಿಮೆದಾರರನ್ನು ಈ ಖಾದಿ ಯೋಜನೆಯಲ್ಲಿ ದಾಲ್‌ಮಿಲ್‌ಗಳನ್ನು ಮಾಡಿದ್ದಾರೆ, ಆಯಿಲ್ ಮಿಲ್‌ಗಳನ್ನು ಮಾಡಿದ್ದಾರೆ, ಸ್ಟೋರ್ ಕ್ರಷರ್‌ಗಳಿಗೆ ಸಾಲವನ್ನು ಕೊಟ್ಟಿದ್ದಾರೆ. ಇದರಲ್ಲಿ ಗುಡಿ ಕೈಗಾರಿಕೆಗೆ ಮಾತ್ರ ಸೀಮಿತವಾಗಿ ಸಾಲವನ್ನು ಕೊಟ್ಟಿಲ್ಲ. ಇಂಥ ಸಾಲವನ್ನು ಆಗ ನೇರವಾಗಿ ಪಡೆದಿರುವುದರಿಂದ ಇದನ್ನು ಕಡ್ಡಾಯವಾಗಿ ವಸೂಲು ಮಾಡುವ ಕ್ರಮವನ್ನು ಅನುಸರಿಸುವ ಅವಶ್ಯಕತೆ ಇದೆಯೆಂಬ ಮಾತನ್ನು ಹೇಳುತ್ತೇನೆ. ಸನ್ಮಾನ್ಯ ಸಚಿವರು ತಂದಿರುವಂಥ ವಿಧೇಯಕ ಸಮಂಜಸವಾಗಿದೆ ಎನ್ನುವ ಮಾತನ್ನು ಹೇಳಲಿಚ್ಛಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಪ್ರಸ್ತುತ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಬಿಲ್ ಅನ್ನು ಏನು ತಂದಿದ್ದಾರೆ, ಇದರಲ್ಲಿ ನಿಜವಾದಂಥ ಬಡವರಿಗೆ ಈ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯನ್ನು ಮಾಡಿ, ಇವತ್ತು ಅದರಲ್ಲಿ ನಷ್ಟವನ್ನು ಅನುಭವಿಸಿರುತ್ತಾರೆ. ಇದರಲ್ಲಿ ಯಾರು ಸಣ್ಣ ಹಿಡುವಳಿದಾರರು ಇರುತ್ತಾರೆ, ಅಂಥವರಿಗೆ ಸರ್ಕಾರ ಒಮ್ಮೆ ಸಾಲವನ್ನು ಮನ್ನಾ ಮಾಡುವುದಕ್ಕೆ ತೊಂದರೆ ಏನು ಇದೆ? ಯಾರ್ಯಾರು ದೊಡ್ಡವರು 15 ಲಕ್ಷ, 20 ಲಕ್ಷ, 25 ಲಕ್ಷ, 30 ಲಕ್ಷ ರೂಪಾಯಿಗಳನ್ನು ಅದು ನಕಲು ದಾಖಲೆಯನ್ನು ಸೃಷ್ಟಿ ಮಾಡಿರುತ್ತಾರೆ, ಕೆಲವು ಸಾಲವನ್ನು ತೆಗೆದುಕೊಳ್ಳ ಬೇಕಾದರೆ ಆ ಸಾಲವನ್ನು ತೆಗೆದುಕೊಂಡಿ

ರುವವರು ಯಾರೆಂಬುದೇ ಗೊತ್ತಿರುವುದಿಲ್ಲ. ಅವನ ಹೆಸರಿನಲ್ಲಿ ಸಾಲ ಬಂದಿರುತ್ತದೆ. ಇಂಥ ನಕಲು ದಾಖಲೆಗಳನ್ನು ಸೃಷ್ಟಿ ಮಾಡುವವರ ಮೇಲೆ ತಾವು ಕ್ರಮ ತೆಗೆದುಕೊಳ್ಳುವುದಕ್ಕೆ ಬೇಕಾದರೆ ತಿದ್ದುಪಡಿ ಮಾಡಿ ಬಿಲ್ ತೆಗೆದುಕೊಂಡು ಬನ್ನಿ ನಮ್ಮದು ಏನೂ ಅಭ್ಯಂತರವಿಲ್ಲ. ಅದರೆ ಬಡವರು 25,000, 50,000, ರೂಪಾಯಿಗಳಿರ ಬಹುದು, ಅಂಥವರಿಗೆ ಸಾಲ ಕೊಡುವುದೇ ಕಷ್ಟ, ಬೇಕಾದರೆ ಯಾರ್ಯಾರು ತಿಮಿಂಗಲಗಳಿದ್ದಾರೆ, ಅವರಿಂದ ವಸೂಲಿ ಮಾಡಿಕೊಳ್ಳಲಿ ಅದರಲ್ಲಿ ಕೆಲವು ಏನಾಗಿದೆಯೆಂದರೆ ಸಾಲ ತೆಗೆದುಕೊಂಡಿರುವವರಿಗೆ ಯಾರದೋ ಜಮೀನು ಇರುತ್ತದೆ. ಇಲ್ಲಿ ಅಧಿಕಾರಿಗಳು ಯಾರದೋ ಜಮೀನಿನ ಮೇಲೆ ಸಾಲವನ್ನು ಮಂಜೂರಾತಿ ಮಾಡಿರುತ್ತಾರೆ. ತಾವು ಅಂಥದ್ದನ್ನು ತೆಗೆದುಕೊಂಡು ಗೊತ್ತಿಲ್ಲದೇ ಇರುವ ಪಾಪದ ವ್ಯಕ್ತಿಗಳು ಯಾರು ಇರುತ್ತಾರೆ. ಈ ಬಿಲ್ ಅನ್ನು ತಂದು ನಾಳೆ ಬೆಳಿಗ್ಗೆ ಕಂದಾಯ ಇಲಾಖೆಯವರು ವಸೂಲು ಮಾಡುವುದೆಂದು ನೀವು ಅಮೆಂಡ್‌ಮೆಂಟ್ ತರುತ್ತೀರಿ. ಇವತ್ತು ಈ ಪಾಪದವರು ತೊಂದರೆಗೆ ಸಿಕ್ಕಿಕೊಳ್ಳುವಂಥ ಪರಿಸ್ಥಿತಿ ಬರುತ್ತದೆ. ಇದಕ್ಕೆ ತಿದ್ದಪಡಿಯನ್ನು ತರಬೇಕಾಗುತ್ತದೆ. ಸಣ್ಣ ಹಿಡುವಳಿದಾರರು 50,000 ದಿಂದ ಒಂದು ಲಕ್ಷ ರೂಪಾಯಿಗಳವರೆಗೆ ಮನ್ನಾ ಮಾಡಿ. ಇನ್ನು ಬಾಕಿ 15 ರಿಂದ 20 ಲಕ್ಷ ರೂಪಾಯಿಗಳವರೆಗೆ ಇದ್ದರೆ ಅಂಥವರಿಂದ ಕಂದಾಯ ಇಲಾಖೆಯವರು ವಸೂಲಿಯನ್ನು ಮಾಡಲಿ, ನಮ್ಮದೇನೂ ಅಭ್ಯಂತರವಿಲ್ಲ. ಅದನ್ನು ಒಂದು ಲಕ್ಷಕ್ಕೆ, ಎರಡು ಲಕ್ಷಕ್ಕೆ ಮಾಡುತ್ತೀರೋ, ಎಂಬುದನ್ನು ಖಡಾಖಂಡಿತವಾಗಿ ಮಾನ್ಯ ಮಂತ್ರಿಯವರು ಈ ಸದನಕ್ಕೆ ತಿಳಿಸಿ, ಅದಕ್ಕೆ ತಿದ್ದುಪಡಿ ತಂದು, ಈ ಮಸೂದೆಯನ್ನು ಮಾಡುವುದು ಸೂಕ್ತವೆಂದು ನನ್ನ ಭಾವನೆಯಾಗಿದೆ.

ಶ್ರೀ ನೆಹರೂ ಓಲೆಕಾರ್ ಚನ್ನಬಸಪ್ಪ (ಹಾವೇರಿ) : ಮಾನ್ಯ ಅಧ್ಯಕ್ಷರೆ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಕೊಟ್ಟಿರುವಂಥ ಸಾಲ ವಸೂಲಾತಿಗಾಗಿ ತಿದ್ದುಪಡಿ ವಿಧೇಯಕವನ್ನು ಮಂಡಿಸಿರುವುದರ ಬಗ್ಗೆ ಚರ್ಚೆ ನಡೆದಿದೆ. ಇವತ್ತು ನಾವು ಎಲ್ಲೋ ಒಂದು ಹಂತದಲ್ಲಿ ತಪ್ಪು ದಾರಿಯನ್ನು ತುಳಿಯುತ್ತಿದ್ದೇವೆ ಎಂದು ಈ ಸಂದರ್ಭದಲ್ಲಿ ನನಗನ್ನಿಸುತ್ತದೆ. ಸಾಲ ಕೊಟ್ಟಂಥದ್ದನ್ನು ನಾವು ಸರಿಯಾದ ರೀತಿಯಲ್ಲಿ ವಸೂಲಿ ಮಾಡಲಿಲ್ಲವೆಂದರೆ ಸಾಲ ಕೊಟ್ಟಂಥ ಸಂಸ್ಥೆ ಕೆಲವೇ ದಿನಗಳಲ್ಲಿಯೇ ನಾಶವಾಗಿ ಹೋಗಿ ಬಿಡುತ್ತದೆ. ಇಂಥ ಅನೇಕ ಸಂಘ ಸಂಸ್ಥೆಗಳು, ಮಂಡಳಿಗಳು ಹಾನಿಯನ್ನು ಅನುಭವಿಸುತ್ತಿರುವುದನ್ನು ನಾವು ಕಂಡಿದ್ದೇವೆ. ಖಾದಿ ಬೋರ್ಡ್‌ನಿಂದ

ಸಾಲವನ್ನು ಪಡೆದಂಥ ಅನೇಕ ಜನರು ಸ್ಟೋನ್ ಕ್ರಷರ್‌ಗಳನ್ನು, ಆಯಿಲ್ ಮಿಲ್‌ಗಳನ್ನು ಹಾಗೂ ದಾಲ್ ಮಿಲ್‌ಗಳನ್ನು ಹಾಕಿದ್ದು, ಅವರು ಉತ್ತಮ ರೀತಿಯಲ್ಲಿಯೇ ಆ ಎಲ್ಲ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಉತ್ತಮ ರೀತಿಯಲ್ಲಿ ನಡೆಯುತ್ತಿರುವಂಥ ಸಂದರ್ಭದಲ್ಲಿಯೂ ಹಣವನ್ನು ತುಂಬಲು ಅವರಿಂದ ಸಾಧ್ಯವಾಗುತ್ತಿಲ್ಲ. ಕಾರಣವೆಂದರೆ, ನಮ್ಮದೂ ಸಾಲ ಮನ್ನಾ ಆಗುತ್ತದೆ, ಈ ಒಗ್ಗೆ ನಾವು ಸರ್ಕಾರಕ್ಕೆ ಮನವಿ ಸಲ್ಲಿಸೋಣ ಎನ್ನುವ ಚಿಂತನೆಯನ್ನು ನಡೆಸಿದ್ದಾರೆಯೇ ವಿನಃ, ನಾವು ಸಾಲ ತೆಗೆದುಕೊಂಡಂಥದ್ದನ್ನು ವಾಪಸ್ಸು ಕಟ್ಟಬೇಕು ಎನ್ನುವ ವಿಚಾರ ಅವರಲ್ಲಿ ಬರುತ್ತಿಲ್ಲ. ಈ ರೀತಿಯಾಗಿ, ಸಾಲವನ್ನು ಪಡೆದಂಥವರು ಉತ್ತಮ ಸ್ಥಿತಿಯಲ್ಲಿದ್ದಾಗಲೂ ಸಹ, ಸಾಲವನ್ನು ಮರುಪಾವತಿ ಮಾಡದೇ ಇರುವಂಥ ಸಂದರ್ಭದಲ್ಲಿ ಆ ಮಂಡಳಿ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡು ಸಾಲವನ್ನು ವಸೂಲಾತಿ ಮಾಡಲೇ ಬೇಕಾಗುತ್ತದೆ. ಅದನ್ನು ಮಾಡದೇ ಇದ್ದರೆ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮುಚ್ಚುವಂಥ ಪ್ರಸಂಗ ಬರುತ್ತದೆ. ಇವತ್ತಿನ ದಿವಸ ಇನ್ನೂ ಅನೇಕ ಜನರು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಸಾಲ ಪಡೆಯ ಬೇಕು ಎಂದು queue ನಲ್ಲಿದ್ದಾರೆ. ಸಾಲವನ್ನು ಪಡೆದು ಉದ್ದಿಮೆ ಗಳನ್ನು ಪ್ರಾರಂಭಿಸಿ, ತಮ್ಮ ಜೀವನವನ್ನು ಸಾಗಿಸಬೇಕು ಎಂದು ಲಕ್ಷಾಂತರ ಯುವಕರು ಕಾದು ಕುಳಿತಿರುವಂಥ ಈ ಸಂದರ್ಭದಲ್ಲಿ ಹಿಂದೆ ಸಾಲದ ಉಪಯೋಗವನ್ನು ಪಡೆದಂಥವರು ಸಾಲವನ್ನು ಬೇಗಬೇಗನೆ ಕಟ್ಟಿದರೆ ಬೇರೆಯವರಿಗೂ ಸಹ ಸಾಲವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಆ ಕಾರಣದಿಂದ ಇವತ್ತಿನ ದಿವಸ ತಂದಿರುವಂಥ ವಿಧೇಯಕವು ಸೂಕ್ತವಾಗಿರು ವಂಥದ್ದಾಗಿದ್ದು, ಅದಕ್ಕೆ ಎಲ್ಲರೂ ಅನುಮೋದನೆಯನ್ನು ನೀಡುವುದು ಬಹಳ ಸೂಕ್ತವಾಗಿದೆ. ಮಂಡಳಿಯ ಸಾಲ ವಸೂಲಾದರೆ ನಂತರ ಬೇರೆಯವರಿಗೂ ಸಾಲವನ್ನು ಕೊಟ್ಟು ಅವರ ಜೀವನ ಪರಿಸ್ಥಿತಿಯನ್ನೂ ಸುಧಾರಿಸಲಿಕ್ಕೆ ಸಾಧ್ಯತೆ ಇದೆ. ಆದ್ದರಿಂದ ಇದು ಒಳ್ಳೆಯದಿದೆ ಎನ್ನುವುದನ್ನು ಹೇಳುತ್ತೇನೆ.

ಶ್ರೀ ಕೆ. ಎಂ. ವಿರೂಪಾಕ್ಷಪ್ಪ (ಚನ್ನಗಿರಿ) : ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರ ಮಂಡಿಸಿರುವ ಖಾದಿ ಮತ್ತು ಗ್ರಾಮೋದ್ಯೋಗಗಳ ತಿದ್ದುಪಡಿ ವಿಧೇಯಕವು ಸರಿಯಿದೆ. ಗ್ರಾಮೀಣ ಭಾಗದಲ್ಲಿ ಬಹಳಷ್ಟು ವಿದ್ಯಾವಂತ ಯುವಕರು ಖಾದಿ ಬೋರ್ಡ್‌ನಿಂದ ಸಾಲವನ್ನು ತೆಗೆದುಕೊಂಡಿದ್ದಾರೆ. ಅದರಿಂದ ಕ್ರಷರ್‌ಗಳನ್ನು, ಎಣ್ಣೆ ಯಂತ್ರಗಳನ್ನು ಹಾಕಿಕೊಂಡಿದ್ದಾರೆ. ಹೀಗೆ ಸಾಲ ಪಡೆದಂಥವರಿಗೆ ಸಾಕಷ್ಟು ಸಬ್ಸಿಡಿಯನ್ನೂ ಸಹಾ ಕೊಟ್ಟಿದ್ದಾರೆ.

ದಯಮಾಡಿ ವಿರೋಧ ಪಕ್ಷದವರು ಇದನ್ನು ಗಮನಿಸಬೇಕು. ಬಹಳಷ್ಟು ಸಬ್ಸಿಡಿಯನ್ನು ಸಹಾ ಖಾದಿ ಬೋರ್ಡ್‌ನವರು ಕೊಟ್ಟಿದ್ದಾರೆ. ಮತ್ತು ಕೆಲವು ಭಾಗವನ್ನು ಸಾಲದ ರೂಪದಲ್ಲಿ ಕೊಟ್ಟಿದ್ದಾರೆ. ಕೊಟ್ಟಿರುವಂಥ ಸಾಲವನ್ನು ಕಟ್ಟಬೇಡಿ ಎಂದು ಹೇಳಿದರೆ ಮುಂದೆ ಸಾಲ ತೆಗೆದುಕೊಳ್ಳತಕ್ಕಂಥವರಿಗೆ ತೊಂದರೆಯಾಗುತ್ತದೆ, ಆ ಸಂಸ್ಥೆ ಮುಚ್ಚಿಹೋಗುತ್ತದೆ. ಆ ಸಂಸ್ಥೆ ಮುಚ್ಚುವು ದರಿಂದ ಗ್ರಾಮೀಣ ಭಾಗದ ಬಹಳಷ್ಟು ಜನ ವಿದ್ಯಾವಂತ ಯುವಕರಿಗೆ ತೊಂದರೆಯಾಗುತ್ತದೆ. ಸಾಲವನ್ನು ಕೊಡತಕ್ಕಂಥ ಸಂದರ್ಭದಲ್ಲಿ ಈ ಸಂಸ್ಥೆಯವರು ಸೈಟುಗಳನ್ನು ಮತ್ತು ಬೇರೆ ಬೇರೆ ಆಸ್ತಿಗಳನ್ನು ಆಧಾರ ಮಾಡಿಕೊಂಡು, mortgage ಮಾಡಿಕೊಂಡು ಲಕ್ಷಾಂತರ ರೂಪಾಯಿಗಳ ಸಾಲವನ್ನು ಕೊಡಲಾಗಿದೆ. ವಿರೋಧ ಪಕ್ಷದವರು ಹೇಳಿದ ಹಾಗೆ ಕೇವಲ 20,000, 50,000 ರೂ.ಗಳನ್ನು ಮಾತ್ರ ಸಾಲವಾಗಿ ಕೊಟ್ಟಿಲ್ಲ. ಖಾದಿ ಬೋರ್ಡ್‌ನವರು ಇಟ್ಟಿಗೆ ಭಟ್ಟಿಗಳಿಗೆ, ಕ್ರಷರ್‌ಗಳಿಗೆ, ಎಣ್ಣೆ ಮಿಲ್ಲುಗಳಿಗೆ ಮತ್ತು ಬೇರೆ ಬೇರೆ ಉದ್ಯೋಗಗಳಿಗಾಗಿ ಸಾಲವನ್ನು ಕೊಟ್ಟಿದ್ದಾರೆ. ಇದರಲ್ಲಿ ನೀವು ಪರಿಷ್ಕರಣೆ ಮಾಡುವುದಾದರೆ, ಬಡ್ಡಿಯನ್ನು ಮನ್ನಾ ಮಾಡುವುದರ ಮೂಲಕ ಸಾಲ ವಸೂಲಾತಿಗೆ ಕಟ್ಟುನಿಟ್ಟಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳ ಲೇಬೇಕು. ಆದ್ದರಿಂದ ಈ ವಿಧೇಯಕವನ್ನು ನಾವು ಬೆಂಬಲಿಸುತ್ತೇವೆ.

ಶ್ರೀ ಸಂಗಣ್ಣ ಕರಡಿ ಅಮರಪ್ಪ (ಕೊಪ್ಪಳ) : ಮಾನ್ಯ ಅಧ್ಯಕ್ಷರೆ, ಖಾದಿ ಮತ್ತು ಗ್ರಾಮೋದ್ಯೋಗಗಳ ತಿದ್ದುಪಡಿ ವಿಧೇಯಕದ ಬಗ್ಗೆ ಮಾತನಾಡು ವುದಾದರೆ, ಗಾಂಧೀಜಿಯವರ ಕನಸನ್ನು ನನಸು ಮಾಡಬೇಕೆಂದು ನಾವೆಲ್ಲ ಒಂದು ಕಡೆ ಮಾತನಾಡುತ್ತೇವೆ. ಈಗ ಗುಡಿ ಕೈಗಾರಿಕೆಗಳೆಲ್ಲ ಮುಚ್ಚಿ ಹೋಗುತ್ತಿವೆ. ಅವುಗಳು ತಯಾರಿಸುವ ಉತ್ಪನ್ನಗಳಿಗೆ ಡಿಮ್ಯಾಂಡೇ ಇಲ್ಲ. ಇವತ್ತು ಹಳ್ಳಿಗಾಡಿನಲ್ಲಿರುವಂಥ ರೈತನೂ ಸಹ ನಗರಕ್ಕೆ ವಲಸೆ ಬರುತ್ತಿದ್ದಾನೆ. ಇಂಥ ಸಂದರ್ಭದಲ್ಲಿ ಗುಡಿ ಕೈಗಾರಿಕೆಗಳೂ ಮುಚ್ಚಿ ಹೋದರೆ ಈ ಭಾರತದ ಅಭ್ಯುದಯವಾಗುತ್ತದೆಯೇ? ವಿಧೇಯಕದಲ್ಲಿ ಅವರು ಯಾವುದೇ ಉದ್ದೇಶ ಮತ್ತು ಕಾರಣಗಳನ್ನು ಕೂಡ specific ಆಗಿ ಹೇಳಿಲ್ಲ. ಯಾವ ಯಾವ ಉದ್ದಿಮೆಗಳವರು ತೆಗೆದುಕೊಂಡಿರುವ ಸಾಲ ಎನ್ನುವುದೂ ಇದರಲ್ಲಿ ಖಚಿತವಾಗಿ ಇಲ್ಲ. ಚಿಕ್ಕ ಉದ್ದಿಮೆಗಳಾದ ಆಯಿಲ್ ಮಿಲ್ ಇರಬಹುದು, ಸ್ಟೋನ್ ಕ್ರಷರ್ ಇರಬಹುದು, ರವಾ ಮಿಲ್ ಇರಬಹುದು, ದಾಲ್ ಮಿಲ್ ಇರಬಹುದು, ಇವೆಲ್ಲವೂ ಕೂಡ ಗುಡಿ ಕೈಗಾರಿಕೆಯಲ್ಲಿ ಬರುವಂಥ

ಉದ್ದಿಮೆಗಳು. ಇವುಗಳಿಗೆ ಸರ್ಕಾರ encourage ಮಾಡಬೇಕಾ ಗುತ್ತದೆ. ಅದನ್ನು ಬಿಟ್ಟು, ಸಾಲ ವಸೂಲಿ ಮಾಡುವುದಕ್ಕೆ ಹೋಗಿ ಆ ಉದ್ದಿಮೆಗಳನ್ನು ಮುಟ್ಟುಗೋಲು ಹಾಕಿಕೊಂಡರೆ, ಆ ಉದ್ದಿಮೆಗಳನ್ನು ಅವಲಂಬಿಸಿರತಕ್ಕಂಥ ಕುಟುಂಬಗಳು ಸರ್ವನಾಶವಾಗುತ್ತವೆ. ಆ ಕಾರಣಕ್ಕಾಗಿ, ಆ ಉದ್ದಿಮೆಗಳವರಿಗೆ ಇನ್ನಷ್ಟು ಉತ್ತೇಜನ ಕೊಟ್ಟು, ಕಾಲಾವಧಿಯನ್ನು ಕೊಟ್ಟು ಈ ಉದ್ದಿಮೆಗಳನ್ನು ಉಳಿಸತಕ್ಕಂಥದ್ದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು ಎಂದು ನಾನು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ನೆ.ಲ.ನರೇಂದ್ರ ಬಾಬು (ಮಹಾಲಕ್ಷ್ಮಿ ಲೇಔಟ್) : ಸನ್ಮಾನ್ಯ ಅಧ್ಯಕ್ಷರೆ, ಮಹಾತ್ಮ ಗಾಂಧಿಯವರ ಕನಸು ಗ್ರಾಮೀಣ ಬದುಕಿನ ಸುಧಾರಣೆ ಯಾಗಿತ್ತು. Industrial Revolution ಆದ ನಂತರ ಗ್ರಾಮೀಣ ಕರಕುಶಲ ಮತ್ತು ಇನ್ನಿತರ ಗುಡಿ ಕೈಗಾರಿಕೆಗಳ ಅವಲಂಬಿತರ ಬದುಕು ಇವತ್ತು ದುಸ್ತರವಾಗಿತರಕ್ಕಂಥಾದ್ದು ತಮಗೆ ವೇದ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ಇವತ್ತು ತಾವು ತಂದಿರುವ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ ತಿದ್ದುಪಡಿ ವಿಧೇಯಕವು ನಕಲಿ ಸಾಲಗಾರರಿಗೆ ಸರಿಯಷ್ಟೆ. ನಿಜವಾದ ಅಸಲಿ ಸಾಲಗಾರರು ಅಂದರೆ ಒಂದು ಅಥವಾ ಎರಡು ಲಕ್ಷ ರೂ.ಗಳೊಳಗೆ ಸಾಲವನ್ನು ತೆಗೆದುಕೊಂಡಿರತಕ್ಕಂಥವರಿಗೆ ಈ ವಿಧೇಯಕ ಖಂಡಿತವಾಗಿಯೂ "ಗುಬ್ಬಿ ಮೇಲೆ ಬ್ರಹ್ಮಾಸ್ತ್ರ" ಬಿಟ್ಟ ಹಾಗಾಗುತ್ತದೆ. ಅವರು ಉತ್ಪಾದನೆ ಮಾಡತಕ್ಕಂಥ ವಸ್ತುಗಳಿಗೆ ಅಗತ್ಯವಾಗಿರುವಂಥ ಮಾರುಕಟ್ಟೆಗಳ ಕೊರತೆ ಇದೆ. ಈ ಮೊದಲು ಗ್ರಾಮೀಣ ಬದುಕಿನಲ್ಲಿ ಈ ವಸ್ತುಗಳು ಇರುತ್ತಿದ್ದವು. Industrial Revolution ಆದ ಮೇಲೆ ಮತ್ತು ಬೇರೆ ಬೇರೆ Multi National Commpanies intervention ಆದ ಮೇಲೆ ಅವರ ಬದುಕು ಬಹಳ ದುಸ್ತರವಾಗಿದೆ. ಗುಡಿಕೈಗಾರಿಕೆಗಳ ಮೇಲೆ ಅವಲಂಬಿತ ವಾಗಿರುವ ಸುಮಾರು 25 ಸಾವಿರ ಕುಟುಂಬಗಳವರ ಮೇಲೆ, ಬಡವರ ಪರವಾಗಿರತಕ್ಕಂಥ ಈ ಬಿ.ಜೆ.ಪಿ. ಸರ್ಕಾರ ಬ್ರಹ್ಮಾಸ್ತ್ರವನ್ನು ಬಿಡುವುದಕ್ಕೆ ಮುಂಚೆ ಮತ್ತೊಮ್ಮೆ ಯೋಚನೆ ಮಾಡಬೇಕು. ಕ್ರಷರ್ ಹಾಕಿಕೊಂಡಿರತಕ್ಕಂಥವರು ಮತ್ತು ದೊಡ್ಡ–ದೊಡ್ಡ ಗಾಣಗಳನ್ನು ಹಾಕಿಕೊಂಡಂಥವರು ಮೇಲೆ ಮಾಡಿ. ಆದರೆ ಈ ನೆಪದಲ್ಲಿ ಗುಡಿ ಕೈಗಾರಿಕೆಗಳವರ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗ ಮಾಡಿ, ಅವರ ಬದುಕನ್ನು ದುಸ್ತರ ಮಾಡಿ, ಅವರನ್ನು ಬೀದಿಪಾಲು ಮಾಡಬೇಡಿ ಎಂದು

ಹೇಳಿ, ಮತ್ತೊಮ್ಮೆ ಈ ಬಗ್ಗೆ ಯೋಚನೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಈಶಣ್ಣ ಗುಳಗಣ್ಣವರ (ಯಲಬುರ್ಗ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ISP component ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ 25,000 50,000 ರೂ.ಗಳ ಸಾಲವನ್ನು ಕೊಟ್ಟಿರಬಹುದು. ಆದರೆ 2008–09ನೇ ಸಾಲಿಂದ PMEGP ಎನ್ನುವ ಹೊಸ ಯೋಜನೆ ಪ್ರಾರಂಭ ವಾಗಿದೆ. ಈ ಯೋಜನೆ ಅತ್ಯಂತ ಪ್ರಮುಖವಾಗಿರತಕ್ಕಂಥ ಯೋಜನೆಯಾಗಿದ್ದು, ಇದನ್ನು ಈಗಾಗಲೇ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೂ ಕೂಡ attachment ಮಾಡಿರುವುದರಿಂದ, ನಿರುದ್ಯೋಗಿ ಯುವಕರಿಗೆ 50 ಸಾವಿರ ರೂ.ಗಳಿಂದ 25 ಲಕ್ಷ ರೂ.ಗಳವರೆಗೆ ಸಾಲ ಕೊಡತಕ್ಕಂಥದ್ದು ಆಗುತ್ತಿದೆ. ಇದರಲ್ಲಿ ಸಾಮಾನ್ಯರಿಗೆ 25% ಸಬ್ಸಿಡಿ ಮತ್ತು SC/ST ಯವರಿಗೆ 35% ಸಬ್ಸಿಡಿ ಕೂಡ ಈ ಯೋಜನೆಯಲ್ಲಿ ಇದೆ. ಈ ಯೋಜನೆಯೂ ಸಹ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಅನುಷ್ಠಾನಗೊಳ್ಳುತ್ತಿರತಕ್ಕಂಥ ಯೋಜನೆಯಾಗಿದೆ. ಇಂಥ ಸಂದರ್ಭದಲ್ಲಿ ಈ ವಿಧೇಯಕವನ್ನು ತಂದಿರತಕ್ಕಂಥದ್ದು ಅತ್ಯಂತ ಪ್ರಾಮುಖ್ಯವಾಗಿರತಕ್ಕಂಥ ದ್ದಾಗಿದೆ, ಏಕೆಂದರೆ, ಸಾಲ ಮನ್ನಾ ಮಾಡತಕ್ಕಂಥ ಹೊಲಸು ಪದ್ಧತಿ ಹೋಗಬೇಕು. ಸರಿಯಾಗಿ ದುಡಿದು ಸಾಲವನ್ನು ಕಟ್ಟತಕ್ಕಂಥ ಮನೋಪ್ರವೃತ್ತಿ ಯುವಕರಲ್ಲಿ ಬರಬೇಕು. ಹಾಗಾಗಿ ಈಗ ತಂದಿರತಕ್ಕಂಥ ವಿಧೇಯಕ ಸಮರ್ಪಕವಾಗಿದೆ ಎನ್ನುವುದನ್ನು ನಾನು ಇಲ್ಲಿ ಮಂಡನೆ ಮಾಡುತ್ತೇನೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ : ಮಹಾತ್ಮಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸು ನನಸಾಗಬೇಕಾದರೆ ಅವರು ಗ್ರಾಮೀಣ ಪ್ರದೇಶಗಳ ಗುಡಿಕೈಗಾರಿಕೆಗೆ ಒತ್ತು ಕೊಡಬೇಕು. ಅವರು ಗ್ರಾಮ ಸ್ವರಾಜ್ಯವಾಗಬೇಕಾದರೆ ಗುಡಿ ಕೈಗಾರಿಕೆಗಳು ಬರಬೇಕೆನ್ನುವ ಕನಸು ಇಟ್ಟುಕೊಂಡಿದ್ದರು. ಅದಕ್ಕೋಸ್ಕರ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ವತಿಯಿಂದ ಗುಡಿ ಕೈಗಾರಿಕೆಗಳಿಗೆ, ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಕೈಗಾರಿಕೆಗಳಿಗೆ ಸಹಾಯ ಧನದ ಮುಖಾಂತರ ಸಾಲವನ್ನು ಕೊಟ್ಟಿರತಕ್ಕಂಥ ಅನೇಕ ನಿದರ್ಶನಗಳಿವೆ. ನಮ್ಮ ಕಡೆ ಮಡಿಕೆ ತಯಾರಿಸುತ್ತಿದ್ದರು. ವೈಜ್ಞಾನಿಕ ಯುಗ ಬಂದ ಮೇಲೆ ಮಡಿಕೆ ತಯಾರಿಸುವುದು ಕಡಿಮೆಯಾಗಿದೆ. ಅವರು ಮೊದಲೇ ಸಾಲ ತೆಗೆದುಕೊಂಡಿದ್ದಾರೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ

ತೆಗೆದುಕೊಂಡ ಆ ಸಾಲ ತೀರಿಸಲಾಗದೆ ಒದ್ದಾಡುತ್ತಿದ್ದಾರೆ. ಅವರಿಗಿರುವ ಒಂದು, ಎರಡು ಎಕರೆ ಜಾಗವನ್ನು ಸಾಲ ವಸೂಲಿಗಾಗಿ ಜಪ್ತಿ ಮಾಡುತ್ತೇವೆಂದು ನೀವು ಈಗ ಹೇಳಿದರೆ ಅವರ ಗತಿ ಏನು? ಅಂಥವರ ಬಗ್ಗೆ ತಾವು ಸ್ವಲ್ಪ ಯೋಚನೆ ಮಾಡಿ. ಸಾಲ ವಸೂಲಿ ಮಾಡಬೇಡಿ ಎಂದು ನಾನು ಹೇಳುತ್ತಿಲ್ಲ, ಸಾಲ ವಸೂಲಿ ಮಾಡಬೇಕು. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿ ಸುಲಭವಾದ ದಾಖಲಾತಿಗಳೊಂದಿಗೆ ಸಾಲ ಸಿಗುತ್ತದೆಂದು ಬಹಳ ಜನ ಟೋಪಿ ಹಾಕುವವರು ಅಲ್ಲಿಂದ ಸಾಲ ತೆಗೆದುಕೊಂಡಿದ್ದಾರೆ. Crusher ನಡೆಸುವುದಕ್ಕೆ, ಬೇರೆ ಬೇರೆ ವಹಿವಾಟು ಗಳನ್ನು ನಡೆಸುವುದಕ್ಕೆ ಸಾಲ ತೆಗೆದುಕೊಂಡಿದ್ದಾರೆ. ಅಂಥವರ ಮೇಲೆ ನೀವು ಏನು ಬೇಕಾದರೂ ಕ್ರಮ ಜರುಗಿಸಿ ಸಾಲ ವಸೂಲಿ ಮಾಡಿ. ಆದರೆ, ಬೆತ್ತ ಹೆಣಿಯುವವರು, ಕುಕ್ಕೆ ಹೆಣಿಯುವರು, ಕಂಬಾರರು ಇವರೆಲ್ಲ ಸೇರಿ ಆ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ದೃಷ್ಟಿಯಲ್ಲಿ ಆ ಗ್ರಾಮೀಣ ಬದುಕಿನಲ್ಲಿ ಯಾರು ಹೆಚ್ಚಿನ ಶ್ರದ್ಧೆ ಇಟ್ಟುಕೊಂಡು ಇವತ್ತಿಗೂ ಮಾಡುತ್ತಿದ್ದಾರೆ, ಅವರು ಇವತ್ತೂ ಕುಕ್ಕೆ ಹೆಣಿದುಕೊಂಡು ಸಂತೆಗೆ ಮಾರುವುದಕ್ಕೆ ಹೋಗುತ್ತಾರೆ. ಮದುವೆ ಸೀಸನ್ ಬಂದಾಗ ಮಾತ್ರ ಅದು ಖರ್ಚಾಗುತ್ತದೆ, ಬೇರೆ ಸೀಸನ್‌ನಲ್ಲಿ ಅದು ಖರ್ಚಾಗುವುದಿಲ್ಲ. ನನಗೆ ಗೊತ್ತಿರುವ ಹಾಗೆ, ಅವರು ಸಾಲಗಾರರಾಗಿದ್ದಾರೆ. ಒಂದು, ಎರಡು ಎಕರೆ ಹೊಲ ಇರುವ ಅಂಥವರ ಮೇಲೆ ನೀವು ಗದಾಪ್ರಹಾರ ಮಾಡುವುದಕ್ಕೆ ಹೋಗಬೇಡಿ. ಅಂಥವರಿಗೆ ನೀವು exemption ಕೊಡಿ. ಸಾಂಪ್ರದಾಯಿಕ ಒಡಂಬಡಿಕೆಗೆ ಬೇಕಾದಂಥ ಕೆಲವು ಕಸುಬುಗಳನ್ನು ಮಾಡತಕ್ಕಂಥವರು ಗ್ರಾಮೀಣ ಪ್ರದೇಶಗಳಲ್ಲಿ ಬಲಸೆ ಹೋಗುತ್ತಾರೆ. ಅವರ ಬದುಕು ಬಹಳ ಕೆಡುತ್ತದೆ. ಅದಕ್ಕೋಸ್ಕರ ದಯಮಾಡಿ, ಅಂಥವರಿಗೆ exemption ಕೊಟ್ಟು, ಉಳಿದವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳಿ. ದೊಡ್ಡ ಪ್ರಮಾಣದಲ್ಲಿ ಆ ರೀತಿ ಸಾಲ ತೆಗೆದುಕೊಂಡವರ ಮೇಲೆ ಕ್ರಮ ತೆಗೆದುಕೊಳ್ಳಿ, ನಾನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿ ಎಷ್ಟರ ಮಟ್ಟಿಗೆ ಸಾಲ ಕೊಡುತ್ತಾರೆ, ಎಷ್ಟರ ಮಟ್ಟಿಗೆ subsidy ಸಿಗುತ್ತದೆ, ಹೇಗೆ ನುಂಗಿ ಹಾಕುತ್ತಾರೆ ಇದೆಲ್ಲ ನನಗೆ ಗೊತ್ತಿಲ್ಲ. ಬೇಕಾದರೆ, ಆ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟರೆ ಇಲ್ಲಿ ಅದನ್ನು ಹೇಳಬಹುದು. ನೀವು ಅವಕಾಶ ಕೊಡುವುದಿಲ್ಲ. ದಯವಿಟ್ಟು, ಮಹಾತ್ಮ ಗಾಂಧೀಜಿಯವರ ಕನಸು

ನನಸಾಗಲಿಕ್ಕೆ ಆ ಗುಡಿ ಕೈಗಾರಿಕೆಗಳಿಗೆ ಪ್ರಧಾನ್ಯತೆ ಕೊಡಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ವಿ. ವೆಂಕಟರಮಣಪ್ಪ (ರೇಷ್ಮೆ ಸಚಿವರು) : ಈ ಖಾದಿ ಬಟ್ಟೆ ನೇಯುವವರಿಂದ ವಸೂಲಿ ಮಾಡುತ್ತಾರೇನೋ ಎಂದು ಇವರಿಗೆಲ್ಲ ಬಹಳ ಅನುಮಾನ ಬಂದಿದೆ. ಅದಕ್ಕಲ್ಲ. ಸಣ್ಣ ಉದ್ದಿಮೆದಾರರಿಗಲ್ಲ. ಕನಿಷ್ಠ 50 ಸಾವಿರ ರೂಪಾಯಿಗಳ ಒಳಗೆ ಇರುವ ಸಾಲಗಾರರಿಂದ ವಸೂಲು ಮಾಡುವುದಲ್ಲ. ಇಟ್ಟಿಗೆ ತಯಾರಿಸುವ ಸಲುವಾಗಿ ಸಾಲ ತೆಗೆದು ಕೊಂಡಿದ್ದಾರೆ, 20 ಲಕ್ಷ, 25 ಲಕ್ಷ ರೂಪಾಯಿಗಳನ್ನು ಕಟ್ಟಡ ಕಟ್ಟುವುದಕ್ಕೆ ಸಾಲ ತೆಗೆದುಕೊಂಡಿದ್ದಾರೆ, ಯಂತ್ರೋಪಕರಣಗಳಿಗೆ ಸಾಲ ತೆಗೆದು ಕೊಂಡಿದ್ದಾರೆ. ಅಂಥವರ ಮೇಲೆ ನಾವು ಈ ಬಿಲ್ ಅನ್ನು ತಂದಿದ್ದೇವೆಯೇ ಹೊರತು, 20 ಸಾವಿರ, 50 ಸಾವಿರ ರೂಪಾಯಿಗಳ ಸಾಲ ಮಾಡಿರುವ ವರಿಗಲ್ಲ. Tractorಗೆ, building ಕಟ್ಟಲು ಸಾಲ ತೆಗೆದುಕೊಂಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ವೆಂಕಟರಮಣಪ್ಪನವರು ನಿಯಮ 22 (a) ಗೆ ತಿದ್ದುಪಡಿ ತಂದಿದ್ದಾರೆ. ಅದರಲ್ಲಿ, ಮಂಡಳಿಗೆ ಬಾಕಿ ಇರುವ ಹಣವನ್ನು ಭೂ ಕಂದಾಯ ಬಾಕಿಯಂತೆ ವಸೂಲಿ ಮಾಡುವುದು ಎಂದು ಹೇಳಿದೆ. ಇಂಥದ್ದು ಎಂದು ಇಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಎಲ್ಲವೂ ಮಂಡಳಿಯ ಸಾಲಗಳೇ. ಅದರಲ್ಲಿ ಯಾವುದು ಈ ವಸೂಲಾತಿಯಲ್ಲಿ ಬರುತ್ತದೆ, ಇಲ್ಲವೆನ್ನುವುದರ ಬಗ್ಗೆ ಮಾನ್ಯ ಸಚಿವರು ವಿವರಣೆ ಕೊಡುತ್ತಿದ್ದಾರೆ. ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಸಾಲ ಮಾಡಿರುವವರಿಗೆ ಅನ್ವಯಿಸುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ತಿದ್ದುಪಡಿ ಎಲ್ಲಿ ಮಾಡಿದ್ದೀರಿ?

ಶ್ರೀ ಬಸವರಾಜ ಬೊಮ್ಮಾಯಿ : ಅದರಲ್ಲಿ ಯಾವುದು ಬರುತ್ತದೆ, ಯಾವುದು ಇಲ್ಲ ಎನ್ನುವುದರ ಬಗ್ಗೆ ಅದನ್ನೇ clarification ಕೊಡುತ್ತಿದ್ದಾರೆ. (ಗೊಂದಲ) ನೀವೇಕೆ conclusionಗೆ ಬರುತ್ತೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರು ಸಂಬಂಧಪಟ್ಟ ಸಚಿವರು ಹೇಳುತ್ತಾರೆ ಬಿಡಿ. (ಗೊಂದಲ) ಅದರ ಬಗ್ಗೆಯೇ ಅವರು ಹೇಳುತ್ತಿದ್ದಾರೆ. ನೀವೇ conclusion ಗೆ ಬಂದರೆ ಹೇಗೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ : conclusion ಅಲ್ಲ, ಇಲ್ಲಿ ಕಾನೂನಿನಲ್ಲಿ ಹೇಳುತ್ತಿದ್ದೀರಿ. 22 (a) ಯಾವುದನ್ನು ಸೇರಿಸಬೇಕೆಂದು ಹೇಳಿದ್ದಾರೆ, "ವ್ಯಕ್ತವಾಗಿ ಮಂಡಳಿಗೆ ಬಾಕಿ ಇರುವ ಹಣವನ್ನು ಭೂ ಕಂದಾಯ ಬಾಕಿಯಂತೆ ವಸೂಲು ಮಾಡುವುದು" ಎಂದು ಹೇಳಿದ್ದಾರೆ. ಯಾವ್ಯಾವ ಗುಡಿ ಕೈಗಾರಿಕೆಗಳಿಗೆ ಎಷ್ಟೆಷ್ಟು ಹಣ ಕೊಟ್ಟಿದ್ದೇವೆ, ಯಾವ್ಯಾವುದಕ್ಕೆ 20 ಲಕ್ಷ, 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. 25 ಸಾವಿರ, 50 ಸಾವಿರ ರೂಪಾಯಿಗಳವರೆಗೆ ಸಾಲ ತೆಗೆದುಕೊಂಡದ್ದನ್ನು ವಸೂಲು ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ, ಈ ಬಿಲ್‌ನಲ್ಲಿ ಆ ತರಹ ಹೇಳಿಲ್ಲ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ಯಾವ ಬಾಕಿ ಇದೆ, ಆ ಬಾಕಿ ಎಲ್ಲವನ್ನೂ ಕೂಡ Revenue arrears ತರಹ ವಸೂಲಿ ಮಾಡುತ್ತೇವೆಂದು ಹೇಳಿರುವುದು ಬಿಟ್ಟರೆ ಬೇರೆ ಇನ್ನೇನೂ ಈ ತಿದ್ದುಪಡಿಯಲ್ಲಿ ಹೇಳಿಲ್ಲ. ವಸೂಲು ಮಾಡುವುದಕ್ಕೆ ಹೊರಟಿದ್ದೀರಿ, ಮಾಡಿ, ನಮ್ಮದೇನೂ ತಕರಾರಿಲ್ಲ. ಆದರೆ, ವಸೂಲು ಮಾಡುವುದಕ್ಕಿಂತ ಮುಂಚಿತವಾಗಿ ಶಿವಲಿಂಗೇಗೌಡರವರು ಹೇಳಿದ ಹಾಗೆ, ಕುಂಬಾರಿಕೆ, ಹೆಂಚು, ಮಡಿಕೆ ತಯಾರಿಸುವವರಿಗೆ ಸಾಲ ಕೊಟ್ಟಿರುತ್ತೀರಿ. ಇತ್ತೀಚೆಗೆ ಆ ಕಸುಬು ಬಿಟ್ಟುಬಿಟ್ಟಿದ್ದಾರೆ. ಊರಿನಲ್ಲಿ ಯಾರೂ ಮಡಿಕೆಯನ್ನು ಉಪಯೋಗಿಸುವುದಿಲ್ಲ, ಮನೆಗೆ ಹೆಂಚೂ ಉಪಯೋಗಿಸುವುದಿಲ್ಲ. ಅವರಿಗೆ ಆ ಕಸುಬೂ ಹೊರಟುಹೋಯಿತು, ನೀವು ಕೊಟ್ಟಿರುವ ಹಣವೂ ಹೋಯಿತು, ಅವರು ಬೀದಿ ಪಾಲಾಗಿ ಹಳ್ಳಿಗಳಲ್ಲಿ ಕೂಲಿ ಮಾಡುತ್ತಿರಬಹುದು ಅಥವಾ ಪಟ್ಟಣಕ್ಕೆ ಬಂದು ಸೇರಿರಬಹುದು. ಅವರಿಂದ ಈಗ ವಸೂಲಿ ಮಾಡುವುದಕ್ಕೆ ಹೊರಟರೆ ಅವರು ಮಾಡಿದಂಥ ವಸ್ತುಗಳಿಗೆ ಮಾರುಕಟ್ಟೆ ಇಲ್ಲ. ಇತ್ತೀಚೆಗೆ ಎಲ್ಲರೂ ಅಲ್ಯೂಮಿನಿಯಂ, ಸ್ಟೀಲ್ ಪಾತ್ರೆ ಉಪಯೋಗಿಸುತ್ತಿದ್ದಾರೆ. ಅವರು ತಯಾರಿದುವ ಯಾವ ಪದಾರ್ಥಕ್ಕೂ ಹಳ್ಳಿಯಲ್ಲಿ ಮಾರುಕಟ್ಟೆ ಇಲ್ಲ. ಈ ತರಹದ ಪರಿಸ್ಥಿತಿಯಲ್ಲಿರುವ ಇಂಥವರಿಗೆ ನೀವು ಕೊಟ್ಟಿರುವ ಸಾಲಕ್ಕೆ

ಏನಾದರೂ exemption ಬಗ್ಗೆ ಈ ಬಿಲ್‌ನಲ್ಲಿ ಮಾಹಿತಿ ಇದೆಯೇ? ಇದರಲ್ಲಿ exemption clause ಹಾಕಿದ್ದೀರಾ? ಇಂಥವರಿಗೆ exemption ಇದೆ ಎಂದು ಹೇಳಬೇಕು, ಇಂಥವರ ಹತ್ತಿರ ವಸೂಲು ಮಾಡುತ್ತೇವೆಂದು ಈ ಬಿಲ್‌ನ amenedment ನಲ್ಲಿ ಹೇಳಬೇಕು.

ಶ್ರೀ ವೆಂಕಟರಮಣಪ್ಪ : ಅವರು ಹೇಳಿರುವುದನ್ನು ನಾನು ಒಪ್ಪುತ್ತೇನೆ. ದೊಡ್ಡವರು ಯಾರು 20, 25 ಲಕ್ಷ ರೂಪಾಯಿಗಳ ಸಾಲ ತೆಗೆದು ಕೊಂಡಿದ್ದಾರೆ, ಅದನ್ನು ವಸೂಲು ಮಾಡುತ್ತೇವೆ. **(ಗೊಂದಲ)** 50 ಸಾವಿರ ರೂಪಾಯಿಗಳ ಒಳಗಿರುವ ಸಾಲವನ್ನು ವಸೂಲಿ ಮಾಡುವುದಿಲ್ಲ. ಅವರು ಜಮೀನನ್ನೇಸೂ ಆಧಾರ ಮಾಡಿಕೊಟ್ಟಿರುವುದಿಲ್ಲ. ಯಾರು ಜಮೀನನ್ನು ಆಧಾರ ಮಾಡಿಕೊಟ್ಟು 25–30 ಲಕ್ಷ ರೂಪಾಯಿಗಳಷ್ಟು ಸಾಲ ತೆಗೆದುಕೊಂಡಿದ್ದಾರೆ, ಅಂಥವರಿಂದ ಸಾಲ ವಸೂಲಿ ಮಾಡುವುದಕ್ಕೆ ಈ ಬಿಲ್ ಅನ್ನು ತರುತ್ತಿದ್ದೇವೆ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ : "ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳಡಿಯಲ್ಲಿ ಅಧಿಕೃತಗೊಳಿಸಿದ ಯಾವೊಬ್ಬ ಅಧಿಕಾರಿಯೂ ಅಂಥ ವ್ಯಕ್ತಿಯ ಚರ ಅಥವಾ ಸ್ಥಿರ ಸ್ವತ್ತನ್ನು ಜಪ್ತಿ ಮಾಡಿ ಮಾರಾಟ ಮಾಡುವ ಮೂಲಕ" ಎಂದಿದೆ. **(ಗೊಂದಲ)** ಒಂದು ಲಕ್ಷ ರೂಪಾಯಿಗಳ ಒಳಗಡೆ ಸಾಲ ತೆಗೆದುಕೊಂಡವರದು ಯಾರದೂ ವಸೂಲು ಮಾಡುವುದಿಲ್ಲ, ಅದಕ್ಕಿಂತ ಜಾಸ್ತಿ ಸಾಲ ತೆಗೆದು ಕೊಂಡವರದು ಮಾತ್ರ ವಸೂಲಿ ಮಾಡುತ್ತೇವೆಂದು amendment ತನ್ನಿ.

(ಗೊಂದಲ)

ಶ್ರೀ ವಿ.ವೆಂಕಟರಮಣಪ್ಪ : 50 ಸಾವಿರ ರೂಪಾಯಿಗಳ ಒಳಗಿರುವ ಯಾವುದೇ ಸಾಲವನ್ನು ವಸೂಲಿ ಮಾಡುವುದಿಲ್ಲ. ಅದರ ಮೇಲ್ಪಟ್ಟು ಇದ್ದು ಜಮೀನು ಆಧಾರ ಮಾಡಿ ಸಾಲ ತೆಗೆದುಕೊಂಡದ್ದನ್ನು ವಸೂಲಿ ಮಾಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ : ಈ ರೀತಿ ಬಾಯಲ್ಲಿ ಹೇಳಿದರೆ ಆಗುವುದಿಲ್ಲ, ತಿದ್ದುಪಡಿ ತನ್ನಿ, ನಾಳೆ ಇದಕ್ಕೆ ಒಪ್ಪಿಗೆ ಕೊಡುತ್ತೇವೆ.

ಶ್ರೀ ವಿ.ವೆಂಕಟರಮಣಪ್ಪ : Rules ತಂದು ಮಾಡುತ್ತೇವೆ. ಈಗ Tractor ಗೆ, ಇಟ್ಟಿಗೆ ಗೂಡಿಗೆ ಸಾಲ ತೆಗೆದುಕೊಂಡಿದ್ದಾರೆ. ಅಂಥವರಿಂದ ಸಾಲ ವಸೂಲಿ ಮಾಡುವುದಕ್ಕೆ ಇದನ್ನು ತಂದಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ : ಹಲವಾರು ಸಾಲಗಳನ್ನು ವಿವಿಧ ರೂಪದಲ್ಲಿ ಕೊಟ್ಟಿದ್ದೇವೆ. ಅದು ತಮಗೂ ಗೊತ್ತಿದೆ. ನೀವು ಹೇಳಿರುವಂಥ ಕುಂಬಾರರಿಂದ ಹಿಡಿದು, ಕಮ್ಮಾರರು, ಇತರೆ activity ಮಾಡುವವರಿಗೆ, ಚಪ್ಪಲಿ ಹೊಲಿಯುವವರಿಂದ ಹಿಡಿದು ಎಲ್ಲರಿಗೂ ಸಾಲ ಕೊಟ್ಟಿದ್ದೇವೆ. ಅದೊಂದು ವರ್ಗ. ಇನ್ನೊಂದು ವರ್ಗ ಯಾವುದೆಂದರೆ, ಇತ್ತೀಚಿಗೆ Government of India ದಿಂದ ಹಣಕಾಸು ನೆರವು ಬಂದು ಮೇಲೆ 25 ಲಕ್ಷ, 30 ಲಕ್ಷ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದಾರೆ. ಅವರು ಸ್ಥಿರ ಆಸ್ತಿ ಮಾಡಿದ್ದಾರೆ, building ಕಟ್ಟಿದ್ದಾರೆ, Working capital ತೆಗೆದುಕೊಂಡು ತಮ್ಮ business ಅನ್ನು build up ಕೂಡ ಮಾಡಿಕೊಂಡಿದ್ದಾರೆ, ಕೆಲವು Society ಗಳು ಮಾಡಿದ್ದಾರೆ, ಕೆಲವು individual ಆಸ್ತಿ ಮಾಡಿದ್ದಾರೆ. ಎರಡೂ ತರಹದ ಸಾಲಗಳನ್ನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯವರು ಕೊಟ್ಟಿದ್ದಾರೆ. ನೀವು ಹೇಳಿದಂತೆ, ಅತ್ಯಂತ ಕಡಿಮೆ ಸಾಲ ತೆಗೆದುಕೊಂಡವರೇನಿದ್ದಾರೆ, ಅವರ ಕಸುಬೂ ಕೂಡ ನಿಂತು ಹೋಗಿದೆ. ಅವರಿಗೆ ಯಾವ ಸ್ಥಿರ ಆಸ್ತಿಯೂ ಇಲ್ಲ, ಅವರು ಈಗಾಗಲೇ ತೊಂದರೆಯಲ್ಲಿದ್ದು, ಅವರಿಗೆ ತೊಂದರೆ ಮಾಡಬೇಡಿ ಎಂದು ನೀವು ಹೇಳುತ್ತಿದ್ದೀರಿ, ಅದನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ. ಈಗ ಅದಕ್ಕೆ Exemption clause ತರಬೇಕೆನ್ನುವುದು ತಮ್ಮ ಸಲಹೆ ಇದೆ. ನಾವೂ ಸಹ ಆ ಬಗ್ಗೆ ತಾತ್ವಿಕವಾಗಿ ಒಪ್ಪುತ್ತೇವೆ. ಸುಮಾರು 100 ಕೋಟಿ ರೂಪಾಯಿ ಗಳಿಗಿಂತ ಹೆಚ್ಚು Government of Indiaದಿಂದ ಸಾಲ ತೆಗೆದುಕೊಂಡಿದ್ದೇವೆ. ಇದನ್ನು recovery ಮಾಡಿದರೆ ಮಾತ್ರ ಮತ್ತೆ ಹೊಸ ಸಾಲವನ್ನು Government of India ದಿಂದ ತೆಗೆದುಕೊಂಡು ಬೇರೆ ಕಸುಬುದಾರರಿಗೆ ಕೊಡುವುದಕ್ಕೆ ಸಾಧ್ಯವಿದೆ. ಇದನ್ನು recovery ಮಾಡಲಿಲ್ಲವೆಂದರೆ, ಖಾದಿ ಬೋರ್ಡ್‌ನ activities ತೊಂದರೆಗೊಳಗಾಗುತ್ತದೆ. ಈ ಹಿನ್ನೆಲೆಯಲ್ಲಿ ಸದಸ್ಯರೆಲ್ಲರೂ ಹೆಚ್ಚು ಕಡಿಮೆ ಅದೇ ಭಾವನೆಯಲ್ಲಿ ಹೇಳಿದ್ದಾರೆ. ತಾವು ಹೇಳಿದಂತೆ, ಒಂದು ಲಕ್ಷ ರೂಪಾಯಿಗಳಿಗಿಂತ ಸಾಲ ಕಡಿಮೆ ಇರುವವರಿಗೆ exemption

ಕೊಡಬೇಕೆ ಅಥವಾ 50 ಸಾವಿರ ರೂ.ಗಳಿಗಿಂತ ಕಡಿಮೆ ಸಾಲವಿರುವವರಿಗೆ exemption ಕೊಡಬೇಕೆ ಎಂದು ಇದರಲ್ಲಿ ಯಾವುದು ಎಂಬುದನ್ನು ನಿಗದಿಪಡಿಸಿ, Rules ನಲ್ಲಿ ಆ exemption clause ಅನ್ನು ತಂದು, ಸದನ ಒಪ್ಪಿದರೆ, ಇದನ್ನು ಪಾಸ್ ಮಾಡಬಹುದು. I am just trying to convince.

ಶ್ರೀ ಸಿದ್ದರಾಮಯ್ಯ : ನಾವು Rules ನಲ್ಲಿ ಮಾಡುತ್ತೇವೆ, ಈಗ ಮಂಡಳಿಗೆ Sweeping power ಕೊಟ್ಟುಬಿಡಿ ಅದು Commitment Law ಆಗುತ್ತದೆಯೇ? ನಾಳೆ ಬೆಳಿಗ್ಗೆ Amendment ತೆಗೆದುಕೊಂಡು ಬನ್ನಿ. Bring the amendment.

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ಒಟ್ಟಾರೆ ಭಾವನೆ ಬಂದಾಗ ನಾವು ಯಾವುದನ್ನು Act ನಲ್ಲಿ ಹೇಳುವುದಕ್ಕಾಗಿಲ್ಲ, ಅದನ್ನು Rules ನಲ್ಲಿ ತಂದಿರುವ ಉದಾಹರಣೆಗಳು ಬೇಕಾದಷ್ಟಿದೆ. ಹಲವಾರು Act ಗಳಲ್ಲಿ ಇದೇ ಸದನ ಪಾಸ್ ಮಾಡಿರುವುದೂ ಇದೆ.

ಶ್ರೀ ಸಿದ್ದರಾಮಯ್ಯ : Act ನಲ್ಲೇನಿದೆ, ಅದಕ್ಕೆ ಅನುಗುಣವಾಗಿ Rules ನ್ನು ಯಾವಾಗಲೂ ಮಾಡುವುದು. It cannot be contrary to the provisions of law. Rules are always in accordance with the provisions of the main Act.

ಶ್ರೀ ಬಸವರಾಜ ಎಸ್.ಬೊಮ್ಮಾಯಿ : Yes. I will tell you how it will be in the provisions of the Act .

(7-30 PM)

ಶ್ರೀ ಸಿದ್ದರಾಮಯ್ಯ : ನಾವು ವಸೂಲಿ ಮಾಡಿಯೆಂದು ಹೇಳಲಿಲ್ಲ. ಎಲ್ಲವನ್ನೂ ನೀವೇ ಹೇಳಿಬಿಟ್ಟರೆ? ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ಬಸವರಾಜ ಎಸ್.ಬೊಮ್ಮಾಯಿ : Explanation ಮಾಡುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಅದನ್ನು ಅವರು ಮಾಡುತ್ತಾರೆ ಬಿಡಿ.

ಶ್ರೀ ಬಸವರಾಜ ಎಸ್.ಬೊಮ್ಮಾಯಿ : ಈಗ limited purpose ಇದೆ. Treat it as a revenue recovery ಎಂದು ಇದೆ. Revenue recovery ಒಂದು ಸಲ ಆದಮೇಲೆ ಯಾವುದನ್ನು exempt ಮಾಡಬೇಕು, ಬಿಡಬೇಕು ಎಂಬುದನ್ನು Rules ನಲ್ಲಿ ತರುತ್ತೇವೆ. It will be according to the Act

only. It will not be contrary to any provisions of the Act. ಇದು ಬಹಳ simple ಆಗಿದೆ.

SRI SIDDARAMAIAH : It is very simple I know.

ಡಾ : ವಿ.ಎಸ್.ಆಚಾರ್ಯ : ಈಗ ಮಾಡಿರುವಂಥ Actನಲ್ಲಿ recovery ಸಂಬಂಧಪಟ್ಟಿದ್ದಲ್ಲ. Recovery revenue arrears ಇದ್ದ ಹಾಗೆ ಎಂದು ಇದೆ. ಒಂದು ಲಕ್ಷಕ್ಕಿಂತ ಕೆಳಗಿನದಕ್ಕೆ ಇದನ್ನು apply ಮಾಡುವುದಿಲ್ಲ ವೆಂದು ಮಾನ್ಯ ಸಚಿವರು ಹೇಳಿದ್ದಾರೆ. I think it should be possible.

ಶ್ರೀ ಟಿ.ಬಿ.ಜಯಚಂದ್ರ : ಬೇರೆ ಕೈಗಾರಿಕೆಗಳಿಗೆ ಕೊಡುತ್ತೀರಲ್ಲಾ, ಅದನ್ನು ಸಹ arrears of land revenue ಎಂದು ವಸೂಲಿ ಮಾಡುತ್ತಿರಾ? ಮಡಿಕೆ ಮಾಡುವವನಿಗೆ ಒಂದು ಕಾನೂನು ಇನ್ನೊಬ್ಬರಿಗೆ ಮತ್ತೊಂದು ಕಾನೂನೇ?

ಶ್ರೀ ಬಸವರಾಜ ಎಸ್.ಬೊಮ್ಮಾಯಿ : ಕೆ.ಎಸ್.ಎಫ್.ಸಿ.ಯಲ್ಲಿ ಸಾಲ ತೆಗೆದುಕೊಂಡವನಿಗೆ ಸೆಕ್ಷನ್ 15 ಪ್ರಕಾರ civil court ಗೆ ಕೂಡ power ಇಲ್ಲ. Industries ಮೇಲೆ direct ಆಗಿ ವಸೂಲಿ ಮಾಡುವುದಕ್ಕೆ ಅಧಿಕಾರವಿದೆ.

ಶ್ರೀ ಟಿ.ಬಿ.ಜಯಚಂದ್ರ : ಆ ರೀತಿ ಮಾಡಿ. Arrears of land revenue ಮೇಲೆ ಏಕೆ ಮಾಡುವುದಕ್ಕೆ ಹೋಗುತ್ತೀರಿ?

(ಗೊಂದಲ)

ಶ್ರೀ ಬಸವರಾಜ ಎಸ್.ಬೊಮ್ಮಾಯಿ : Civil Court ಗೆ ಸಹ power ಇಲ್ಲ. ಅದನ್ನು ತರಬೇಕೆಂದು ಹೇಳುತ್ತೀರಲ್ಲಾ? ಅದನ್ನು ಖಾದಿ ಬೋರ್ಡ್‌ಗೆ ತೆಗೆದುಕೊಂಡು ಬನ್ನಿ ಎಂದು ಹೇಳುತ್ತೀರಲ್ಲಾ? Even water charges are also land revenue Chargesನಲ್ಲಿ include ಮಾಡಿ ಎನ್ನುವುದು ನಿಮಗೂ ನಮಗೂ ಗೊತ್ತಿದೆ. Water charges ಅನ್ನು land revenue recovery charges ಎಂದು ವಸೂಲಿ ಮಾಡಬೇಕೆಂದಿದೆ. ಹಾಗಿರುವಾಗ ಇದನ್ನು ಏಕೆ ಬಿಡಬೇಕು? ಹೆಚ್ಚು ಕಡೆ ನಾವು exemption ಮಾಡಿದ್ದೇವೆ, ಅದೇ ರೀತಿ ಇದನ್ನು ಇಲ್ಲೂ ಮಾಡುತ್ತೇವೆ. ನಮ್ಮ ಹತ್ತಿರ Water charges ಅಂದರೆ land revenue charges ಎಂದು recovery ಮಾಡಿ ಎಂದು powers ಇದೆ.

ಎಲ್ಲದಕ್ಕೂ ಜಪ್ತಿ ಮಾಡುತ್ತಾರೆಯೇ? Co-operative Act ನಲ್ಲಿ ಬೇಕಾದಷ್ಟು ಸಾಲಕ್ಕೆ land revenue recovery ಮಾಡುತ್ತಾರೆ. ಎಲ್ಲಾ ಕಡೆ ಜಪ್ತಿ ಮಾಡುತ್ತಾರೆಯೇ? ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ಎಲ್ಲಾ ಕಡೆ ಜಪ್ತಿ ಮಾಡುತ್ತಾರೆಯೇ? ಯಾವುದನ್ನು ಮಾಡಬೇಕು, ಬಿಡಬೇಕು ಎಂಬುದನ್ನು ಸರ್ಕಾರ ನಿರ್ಧಾರ ಮಾಡುತ್ತದೆ. ಬಡವರಿಗೆ ತೊಂದರೆ ಆಗದಂತೆ ಯಾವ ಕೆಲಸವನ್ನೂ ಮಾಡುವುದಿಲ್ಲ. And it will be including the rules. We assure the House that it will be including the rules. It will not be contrary to any part of the Act.

ಶ್ರೀ ಟಿ. ಬಿ. ಜಯಚಂದ್ರ : ಇಲ್ಲಿಯವರೆಗೆ ನೀವು ಸಾಲ ವಸೂಲಿ ಮಾಡಿಲ್ಲವೆ? ಯಾವ ಆಧಾರದ ಮೇಲೆ ಮಾಡಿದ್ದೀರಿ? ಯಾವ ಕಾನೂನಿನ ಅಡಿಯಲ್ಲಿ ವಸೂಲಿ ಮಾಡಿದ್ದೀರಿ?

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಿದ್ದರಾಮಯ್ಯನವರೇನು ಹೇಳಿದ್ದಾರೆ, ನೂರಕ್ಕೆ ನೂರು ಪರ್ಸೆಂಟ್ ಒಪ್ಪಿಕೊಳ್ಳುತ್ತೇನೆ. Bill ನಲ್ಲಿ Sweeping powers ಯಾವುದೂ ಕೂಡ ಕೊಡಬಾರದು. ಆದ್ದರಿಂದ the Government will go on an amendment in this itself. ಹೇಗೆ ಎಂದರೆ ಬಿಲ್ಲಿನಲ್ಲಿರುವ **"22ಎ ನಲ್ಲಿ ಮಂಡಳಿಗೆ ಬಾಕಿ ಇರುವ ಹಣವನ್ನು ಭೂ ಕಂದಾಯ ಬಾಕಿಯಂತೆ ವಸೂಲಿ ಮಾಡುವುದು:** ವ್ಯಕ್ತವಾಗಿ ಅಥವಾ ಇದಂಗಿತವಾಗಿ ಅಥವಾ ಅನ್ಯಥಾ ಮಾಡಿಕೊಂಡ ಒಪ್ಪಂದದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯಿಂದ ಮಂಡಳಿಗೆ ಸಂದಾಯವಾಗತಕ್ಕ ಯಾವುದೇ ಮೊಬಲಗು ಎಂದು ಇದೆ, **ಅದನ್ನು ಬದಲಾವಣೆ ಮಾಡಿ** ವ್ಯಕ್ತವಾಗಿ ಅಥವಾ ಇದಂಗಿತವಾಗಿ ಅಥವಾ ಅನ್ಯಥಾ ಮಾಡಿಕೊಂಡ ಒಪ್ಪಂದದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯಿಂದ ಮಂಡಳಿಗೆ ಸಂದಾಯವಾಗತಕ್ಕ ಒಂದು ಲಕ್ಷಕ್ಕೆ ಮೀರಿದ ಮೊಬಲಗನ್ನು ಗಡುವು ದಿನಾಂಕದಂದು ಅಥವಾ ಅದಕ್ಕೆ ಮೊದಲು ನಾವು ಒಂದು ಲಕ್ಷ ರೂ. ಎಂದು ತಿದ್ದುಪಡಿ ಮಾಡಿ ಸಭೆಯ ಮುಂದೆ ಇಡುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅಸಲು ಒಂದು ಲಕ್ಷ ಎಂದು ಹೇಳಬೇಕು.

ಶ್ರೀ ಸಿದ್ದರಾಮಯ್ಯ : ಅಸಲು ಒಂದು ಲಕ್ಷಕ್ಕಿಂತ ಮೇಲ್ಮಟ್ಟು ಇರುವವರಿಂದ ವಸೂಲಿ ಮಾಡುವುದು. ಎರಡನೆಯದಾಗಿ, Interest shall not exceed principal amount ಎಂದು ಹಾಕಬೇಕು. ಕಾನೂನು ಆ ರೀತಿ ಇದೆ. Civil procedure code ನಲ್ಲಿ ಅದು principal. ನಾವು ಹಿಂದೆ ರೈತರಿಂದ ವಸೂಲಿ ಮಾಡುವಾಗ It shall not exceed principal amount ಎಂದು ಮಾಡಿದ್ದೇವೆ. ಅದನ್ನು ಮಾಡಿ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಸಾಲ ಕೊಡಬೇಕಾದವರದು ಜವಾಬ್ದಾರಿ ಸಹ ಇದರಲ್ಲಿ ಇರುತ್ತದೆ. ಕೇವಲ ಸಾಲ ತೆಗೆದುಕೊಳ್ಳುವವರದು ಅಷ್ಟೇ ಜವಾಬ್ದಾರಿ ಅಲ್ಲ. ಯಾವುದೇ ಸಾಲವನ್ನು ಕೊಡುವಾಗ ಅದು feasible ಇದೆಯೊ, ಇಲ್ಲವೋ, ಆ ಪ್ರಾಜೆಕ್ಟ್‌ಗೆ ಮಾರುಕಟ್ಟೆ ಇದೆಯೊ ಇಲ್ಲವೋ, ಆ ಸಾಲ ಉಪಯೋಗ ಆಗುತ್ತದೆಯೋ, ಇಲ್ಲವೋ, Assets create ಆಗುತ್ತದೆಯೋ ಇಲ್ಲವೋ ಎಂಬುದನ್ನು ನೋಡಿಕೊಂಡು ಸಾಲವನ್ನು ಕೊಡಬೇಕಾಗಿರುವುದು ಅಲ್ಲಿರುವ extension officers ರವರ ಜವಾಬ್ದಾರಿ. ಆದರೆ, ಇದನ್ನು ಯಾರೂ ನೋಡುವುದಿಲ್ಲ. "ಎತ್ತು ಈಯಿತು ಕೊಟ್ಟಿಗೆಗೆ ಕಟ್ಟು" ಎಂಬಂತೆ ಕೊಟ್ಟು ಬಿಡುತ್ತಾರೆ. Ultimately, ಅವನು Assets, market ಎರಡೂ ಇಲ್ಲ, ಅವನು ಸಾಲಗಾರನೂ ಆದ. ಅಂಥವರಿಗೂ ಅಸಲಿಗಿಂತ ಬಡ್ಡಿ ಹೆಚ್ಚು ವಸೂಲಿ ಮಾಡಿದರೆ ಹೇಗೆ? ಉದಾಹರಣೆಗೆ, 5 ಲಕ್ಷ ಸಾಲ ತೆಗೆದುಕೊಂಡಿರುತ್ತಾನೆ, ಬಡ್ಡಿಯನ್ನು 6 ಲಕ್ಷ ವಸೂಲಿ ಮಾಡಿದರೆ ಹೇಗೆ? ಆದ್ದರಿಂದ Interest shall not exceed principal amount ಎಂದು ನಾನು ಹೇಳುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ : As far as SC/ST are concerned, ಕೆ.ಎಸ್.ಎಫ್.ಸಿ.ಯಲ್ಲಿ 4% interestನಲ್ಲಿ ಕೊಡುವುದು ಮತ್ತು ಒಂದೇ ಸಲ principal ಕೊಟ್ಟುಬಿಟ್ಟರೆ without interest ಎಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ, ದಯಮಾಡಿ ಅದನ್ನು ಇದರಲ್ಲಿ ಸೇರಿಸಬೇಕು.

ಶ್ರೀ ಎಸ್.ಸುರೇಶ್‌ಕುಮಾರ್ : One time settlement ಇದೆಯಲ್ಲ let it not be part of the Bill. ತಾವು ಈಗ ಏನು ತಂದಿದ್ದೀರಾ, ಒಂದು ಲಕ್ಷಕ್ಕೆ ಮೀರಿದ ಮೊಬಲಗು ಮತ್ತು interest will not exceed the

prinicipal amount ಅದನ್ನು ತಿದ್ದುಪಡಿಯಲ್ಲಿ ತರುತ್ತೇವೆ. ದಯಮಾಡಿ ಇದನ್ನು ಒಪ್ಪಿಕೊಳ್ಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿ) : ನೀವು ಒಳ್ಳೆಯ ಸಲಹೆಯನ್ನು ಕೊಟ್ಟರೆ ನಾವು ಇಲ್ಲೇ ಒಪ್ಪಿಕೊಂಡುಬಿಡುತ್ತೇವೆ!

ಶ್ರೀ ಸಿದ್ದರಾಮಯ್ಯ : ಬಹಳ ಅಪರೂಪಕ್ಕೆ ಅದೇನೊ ಒಪ್ಪಿಕೊಂಡಿದ್ದೀರಿ! ಏಕೆಂದರೆ ಯಡಿಯೂರಪ್ಪನವರು ಯಾವತ್ತೂ ಒಪ್ಪಿಕೊಳ್ಳುವುದಿಲ್ಲ. ಒಪ್ಪುವ ಪ್ರಶ್ನೆಯೇ ಇಲ್ಲ. ಅದೇನೊ ಇದನ್ನು ಒಪ್ಪಿಕೊಂಡಿದ್ದಾರೆ!

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಏನು ಸಲಹೆ ಕೊಡುತ್ತೀರೊ ಅದು ಸೂಕ್ತವೆಂದು ಕಂಡುಬಂದರೆ ನಾವು ಯಾವುದೇ prestige ಮೇಲೆ ನಿಲ್ಲುವುದಿಲ್ಲ.

ಅಧ್ಯಕ್ಷರು : "2009ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು" ಪರ್ಯಾಲೋಚಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ 2ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಯಾವೊಬ್ಬ ವ್ಯಕ್ತಿಯಿಂದ ಮಂಡಳಿಗೆ ಸಂದಾಯವಾಗತಕ್ಕ ಯಾವುದೇ ಮೊಬಲಗನ್ನು" ಎಂಬ ಪದಗಳಿಗೆ "ಯಾವೊಬ್ಬ ವ್ಯಕ್ತಿಯಿಂದ ಮಂಡಳಿಗೆ ಸಂದಾಯವಾಗತಕ್ಕ ಒಂದು ಲಕ್ಷ ರೂಪಾಯಿಗಳು ಮತ್ತು ಅದಕ್ಕೆ ಮೀರಿದ ಯಾವುದೇ ಮೊಬಲಗನ್ನು ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು".

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ವಿಧೇಯಕದ 2ನೇ ಖಂಡದಲ್ಲಿ ಯಾವೊಬ್ಬ ವ್ಯಕ್ತಿಯಿಂದ ಮಂಡಿಳಿಗೆ ಸಂದಾಯವಾಗತಕ್ಕ ಯಾವುದೇ ಮೊಬಲಗನ್ನು 'ಎಂಬ ಪದಗಳಿಗೆ' ಯಾವೊಬ್ಬ ವ್ಯಕ್ತಿಯಿಂದ ಮಂಡಳಿಗೆ

ಸಂದಾಯವಾಗತಕ್ಕ ಒಂದು ಲಕ್ಷ ರೂಪಾಯಿಗಳು ಮತ್ತು ಅದಕ್ಕೆ ಮೀರಿದ ಯಾವುದೇ ಮೊಬಲಗನ್ನು ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) : ಮಾನ್ಯ ಅಧ್ಯಕ್ಷರೆ, **"2009ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು"** ತಿದ್ದುಪಡಿಗಳೊಂದಿಗೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ **"2009ರ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು"** ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ತಿದ್ದುಪಡಿಯೊಂದಿಗೆ ಒಪ್ಪಿಗೆ ನೀಡಲಾಯಿತು